# <u>ಅಧಿಸೂಚನೆ</u>

# ಕರ್ನಾಟಕ ರಾಜ್ಯ ಉಪನ್ಯಾಸಕರ/ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆ (ಕೆಎಸ್ಇಟಿ)–2015

[ಯು.ಜಿ.ಸಿ, ನವದೆಹಲಿಯಿಂದ ಮಾನ್ಯತೆ ಪಡೆದಿದೆ]

ಮೈಸೂರು ವಿಶ್ವವಿದ್ಯಾನಿಲಯ, ಪರೀಕ್ಷಾ ಭವನ, ಕ್ರಾಫರ್ಡ್ ಹಾಲ್, ಮೈಸೂರು–560 005.

**ಕರ್ನಾಟಕ ರಾಜ್ಯ ಉಪನ್ಯಾಸಕರ/ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆ(ಕೆಎಸ್ಇಟಿ)–2015ರ ಪರೀಕ್ಷೆಗೆ ಸಂಬಂಧಿಸಿದಂತೆ ದಿನಾಂಕ: <u>06ನೇ ಡಿಸೆಂಬರ್ 2015</u>ರಂದು ನಡೆಯುವ ಕೆಎಸ್ಇಟಿ ಪರೀಕ್ಷೆಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಕರೆಯಲಾಗಿದೆ.**

**ಪ್ರಮುಖ ದಿನಾಂಕಗಳು:**

| | | |
|---|---|---|
| 1. ಅರ್ಜಿಯನ್ನು online ಮೂಲಕ ಸಲ್ಲಿಸುವ ದಿನಾಂಕ | : | 20ನೇ ಜುಲೈ 2015 |
| 2. ಅರ್ಜಿಯನ್ನು online ಮೂಲಕ ಸಲ್ಲಿಸಲು ಕೊನೆಯ ದಿನಾಂಕ | : | 14ನೇ ಆಗಸ್ಟ್ 2015 |
| 3. ರೂ.100/–ರ ದಂಡ ಶುಲ್ಕದೊಂದಿಗೆ ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ | : | 25ನೇ ಆಗಸ್ಟ್ 2015 |
| 4. ಭರ್ತಿಮಾಡಿ ಮುದ್ರಿಸಿದ ಅರ್ಜಿಯೊಂದಿಗೆ ಬ್ಯಾಂಕ್ ಚಲನ್, ಜಾತಿ ಪ್ರಮಾಣ ಪತ್ರವನ್ನು ಆಯ್ಕೆ ಮಾಡಿದ ನೋಡೆಲ್ ಕೇಂದ್ರಕ್ಕೆ ಸಲ್ಲಿಸಲು ಕೊನೆಯ ದಿನಾಂಕ | : | 11ನೇ ಸೆಪ್ಟೆಂಬರ್ 2015 |
| 5. ಪರೀಕ್ಷಾ ದಿನಾಂಕ | : | 06ನೇ ಡಿಸೆಂಬರ್ 2015 |

**ಅಭ್ಯರ್ಥಿಗಳು ಅರ್ಜಿಯನ್ನು onlineನಲ್ಲಿ ಸಲ್ಲಿಸುವ ಮುನ್ನ ಈ ಕೆಳಕಂಡ ಅಧಿಸೂಚನೆಯನ್ನು ಗಮನವಿಟ್ಟು ಓದಿ ನಂತರ ಅರ್ಜಿಯನ್ನು ಭರ್ತಿಮಾಡಬೇಕು.**

- ಕೆಎಸ್ಇಟಿ 2015ರ ಪರೀಕ್ಷೆಯನ್ನು 32 ವಿಷಯಗಳಲ್ಲಿ ಕರ್ನಾಟಕ ರಾಜ್ಯಾದಂತ 11 (ಹನ್ನೊಂದು) ನೋಡಲ್ ಕೇಂದ್ರಗಳಲ್ಲಿ ನಡೆಸಲಾಗುತ್ತದೆ.
- ಈ ಪರೀಕ್ಷೆಯಲ್ಲಿ ಉಪನ್ಯಾಸಕರ (ಸಹಾಯಕ ಪ್ರಾಧ್ಯಾಪಕರು) ಹುದ್ದೆಗೆ ಅರ್ಹತೆ ಪಡೆದ ಅಭ್ಯರ್ಥಿಗಳು, ಕರ್ನಾಟಕ ರಾಜ್ಯದ ಯಾವುದೇ ವಿಶ್ವವಿದ್ಯಾನಿಲಯ/ ಕಾಲೇಜು/ ಉನ್ನತ ಶಿಕ್ಷಣ ಸಂಸ್ಥೆ (ಸರ್ಕಾರಿ, ಅನುದಾನಿತ ಮತ್ತು ಖಾಸಗಿ) ಗಳಿಗೆ ನೇಮಕಗೊಳ್ಳಲು ಅರ್ಹರಾಗಿರುತ್ತಾರೆ ಹಾಗೂ ಆಯಾ ಸಂಸ್ಥೆಗಳ ನಿಯಮ ಮತ್ತು ಕಾಯಿದೆಗಳಿಗೆ ಒಳಪಟ್ಟಿರುತ್ತಾರೆ.
- ಪರಿಶಿಷ್ಟ ಜಾತಿ (SC), ಪರಿಶಿಷ್ಟ ಪಂಗಡಗಳ (ST), ವಿಕಲಚೇತನ (PWD) ಅಭ್ಯರ್ಥಿಗಳು (PWD - ಅಂದರೆ ಅಂಗವಿಕಲರು ಮತ್ತು ದೃಷ್ಟಿದೋಷವುಳ್ಳವರು – VH & PH), ಪ್ರವರ್ಗ–I ಮತ್ತು IIA, IIB, IIIA, IIIB ವರ್ಗಗಳು, ಕರ್ನಾಟಕ ಸರ್ಕಾರದ ಹಿಂದುಳಿದ ವರ್ಗದವರ ಪಟ್ಟಿಯಲ್ಲಿರುವಂತಿರಬೇಕು. **(bcdbng@kar.nic.in)**.

**ಅರ್ಹತಾ ನಿಬಂಧನೆಗಳು**

1. ಅಭ್ಯರ್ಥಿಗಳು ಯು.ಜಿ.ಸಿ.ಯಿಂದ ಮಾನ್ಯತೆ ಪಡೆದಿರುವ ವಿಶ್ವವಿದ್ಯಾನಿಲಯ/ ಉನ್ನತ ಶಿಕ್ಷಣ ಸಂಸ್ಥೆಯಿಂದ ಸ್ನಾತಕೋತ್ತರ ಪದವಿ ಅಥವಾ ಸಮಾನವಾದ ಪರೀಕ್ಷೆಗಳಲ್ಲಿ ಮತ್ತು ಮಾನವಿಕ ಶಾಸ್ತ್ರಗಳು (ಭಾಷೆಗಳನ್ನು ಒಳಗೊಂಡಂತೆ), ಸಮಾಜ ವಿಜ್ಞಾನ, ಕಂಪ್ಯೂಟರ್ ಅಂಡ್ ಅಪ್ಲಿಕೇಷನ್ಸ್, ವಿದ್ಯುನ್ಮಾನ ವಿಜ್ಞಾನ ಮುಂತಾದ ವಿಜ್ಞಾನ ವಿಷಯಗಳಲ್ಲಿಯೂ ಸಹ ಕೆಎಸ್ಇಟಿ ಪರೀಕ್ಷೆಯನ್ನು ತೆಗೆದುಕೊಳ್ಳಲು ಅರ್ಹತೆಯನ್ನು ಹೊಂದಿರುತ್ತಾರೆ. ಸಾಮಾನ್ಯ ವರ್ಗದ ಅಭ್ಯರ್ಥಿಗಳು ಒಟ್ಟಾರೆ ಕನಿಷ್ಠ 55% ರಷ್ಟು ಅಂಕಗಳನ್ನು (ಪೂರ್ಣಾಂಕಿತ ಗೊಳಿಸಿರಬಾರದು) ಪಡೆದಿರಬೇಕು, ಪರಿಶಿಷ್ಟ ಜಾತಿ (ಎಸ್.ಸಿ) /ಪರಿಶಿಷ್ಟ ಪಂಗಡ (ಎಸ್.ಟಿ) /ವಿಕಲಚೇತನರು (PWD) ಅಭ್ಯರ್ಥಿಗಳು ಅಂದರೆ ಅಂಗವಿಕಲರು (PH), ದೃಷ್ಟಿದೋಷವುಳ್ಳ (VH), ಪ್ರವರ್ಗ-I, IIA, IIB, IIIA ಮತ್ತು IIIB, ಗುಂಪಿಗೆ ಸೇರಿದ ಅಭ್ಯರ್ಥಿಗಳು ಕನಿಷ್ಠ 50% ರಷ್ಟು ಅಂಕಗಳನ್ನು (ಪೂರ್ಣಾಂಕಿತ ಗೊಳಿಸಿರಬಾರದು) ಪಡೆದಿರಬೇಕು.

2. ಯಾವ ಅಭ್ಯರ್ಥಿಗಳು ಸ್ನಾತಕೋತ್ತರ ಪದವಿಯನ್ನು ಪಡೆದಿರುವ ಅಥವಾ ಸ್ನಾತಕೋತ್ತರ ಪದವಿ ಪರೀಕ್ಷೆಯನ್ನು (ಕಡೆಯ ವರ್ಷದ) ತೆಗೆದುಕೊಂಡಿರುವ ಅಥವಾ ತೆಗೆದುಕೊಳ್ಳುತ್ತಿರುವ ಅಭ್ಯರ್ಥಿಗಳು ಅಥವಾ ಅಂತಿಮ ವರ್ಷದ ಪರೀಕ್ಷೆಯ ಫಲಿತಾಂಶಕ್ಕೆ ಕಾಯುತ್ತಿರುವ ಅಭ್ಯರ್ಥಿಗಳು ಸಹ ಈ ಪರೀಕ್ಷೆಗೆ ಅರ್ಜಿ ಸಲ್ಲಿಸಬಹುದು. ಆದರೆ, ಅಂತಹ ಅಭ್ಯರ್ಥಿಗಳಿಗೆ ಪರೀಕ್ಷೆ ತೆಗೆದುಕೊಳ್ಳಲು ತಾತ್ಕಾಲಿಕವಾಗಿ ಮಾತ್ರ ಪ್ರವೇಶ ನೀಡಲಾಗುವುದು ಮತ್ತು ಅವರು ಸ್ನಾತಕೋತ್ತರ ಪದವಿ ಅಥವಾ ಸಮಾನವಾದ ಪರೀಕ್ಷೆಯನ್ನು ಸಾಮಾನ್ಯ ವರ್ಗದ ಅಭ್ಯರ್ಥಿಗಳು ಒಟ್ಟಾರೆ ಕನಿಷ್ಠ 55% ರಷ್ಟು ಹಾಗೂ ಎಸ್.ಸಿ. / ಎಸ್.ಟಿ/ ಅಂಗವಿಕಲರು / ದೃಷ್ಟಿದೋಷವುಳ್ಳ / ಪ್ರವರ್ಗ-I, IIA, IIB, IIIA ಮತ್ತು IIIB, ಅಭ್ಯರ್ಥಿಗಳು 50% ರಷ್ಟು ಅಂಕ ಪಡೆದು, ಅರ್ಹತೆ ಹೊಂದಿದಾಗ ಮಾತ್ರ ಉಪನ್ಯಾಸಕ ಅರ್ಹತಾ ಪತ್ರ ಪಡೆಯಬಹುದು. ಈ ಅಭ್ಯರ್ಥಿಗಳು, ಕೆಎಸ್ಇಟಿ ಪರೀಕ್ಷೆ ನಡೆದ ದಿನಾಂಕದಿಂದ ಎರಡು ವರ್ಷದೊಳಗಾಗಿ ಅವರ ಸ್ನಾತಕೋತ್ತರ ಪದವಿಯ ಅಂಕಪಟ್ಟಿಗಳನ್ನು ಸಲ್ಲಿಸಬೇಕು. ಇಲ್ಲವಾದಲ್ಲಿ ಅಂತಹವರ ಅರ್ಹತೆಯನ್ನು ರದ್ದುಪಡಿಸಲಾಗುವುದು.

3. ದಿನಾಂಕ 19ನೇ ಸೆಪ್ಟೆಂಬರ್ 1991ರೊಳಗೆ ಪಿ.ಹೆಚ್.ಡಿ. ಪಡೆದಿರುವ ಅಭ್ಯರ್ಥಿಗಳಿಗೆ ತಮ್ಮ ಸ್ನಾತಕೋತ್ತರ ಪದವಿಯಲ್ಲಿ ಗಳಿಸಿರುವ ಅಂಕಗಳಲ್ಲಿ ಶೇಕಡ 5% ರಷ್ಟು ವಿನಾಯಿತಿ ನೀಡಲಾಗುವುದು (ಅಂದರೆ ಶೇಕಡ 55 ರಿಂದ ಶೇಕಡ 50 ರವರೆಗೆ). ಅಂತಹವರು ಕೆಎಸ್ಇಟಿ ಪರೀಕ್ಷೆ ತೆಗೆದುಕೊಳ್ಳಲು ಅರ್ಹರಾಗಿರುತ್ತಾರೆ.

4. ಸ್ನಾತಕೋತ್ತರ ಪದವಿಯಲ್ಲಿ ಅಧ್ಯಯನ ಮಾಡಿದ ವಿಷಯದಲ್ಲಿಯೇ ಅಭ್ಯರ್ಥಿಗಳು ಕೆಎಸ್ಇಟಿ ಪರೀಕ್ಷೆಯನ್ನು ತೆಗೆದುಕೊಳ್ಳಬೇಕು. ಪ್ರಸ್ತುತ ಕೆಎಸ್ಇಟಿಯ ಪ್ರಕಟಣೆಯಲ್ಲಿ ಇಲ್ಲದಿರುವ ವಿಷಯಗಳಿಗೆ ಅಭ್ಯರ್ಥಿಗಳು ವರ್ಷದಲ್ಲಿ 2 ಭಾರಿ ನಡೆಯುವ ಯು.ಜಿ.ಸಿ ಅಥವಾ ಯು.ಜಿ.ಸಿ-ಸಿ.ಎಸ್.ಐ.ಆರ್‌ನ ಎನ್.ಇ.ಟಿ ಪರೀಕ್ಷೆಯನ್ನು ತೆಗೆದುಕೊಳ್ಳಬಹುದು.

5. ಸಾಮಾನ್ಯ ವರ್ಗಕ್ಕೆ ಸೇರದ, ಎಸ್.ಸಿ./ಎಸ್.ಟಿ/ವಿಕಲಚೇತನರು (ಪಿಡಬ್ಲ್ಯೂಡಿ), ಪ್ರವರ್ಗ-I, IIA, IIB, IIIA ಮತ್ತು IIIB ಅಭ್ಯರ್ಥಿಗಳು Online ಅರ್ಜಿಯಲ್ಲಿ ತಮ್ಮ ಜಾತಿಯನ್ನು ಸೂಚಿಸಬೇಕು. ಮುದ್ರಿತ ಅರ್ಜಿಯೊಂದಿಗೆ ಸಂಬಂಧಪಟ್ಟ ದಾಖಲಾತಿಗಳನ್ನು (ಜಾತಿ ಪ್ರಮಾಣಪತ್ರದ ಪ್ರತಿ, ಎಸ್.ಎಸ್.ಎಲ್.ಸಿ, ಸ್ನಾತಕೋತ್ತರ ಅಂಕಪಟ್ಟಿ ಮತ್ತು VH/PH ಪ್ರಮಾಣ ಪತ್ರ) ಲಗತ್ತಿಸಬೇಕು. **ಜಾತಿ ಪ್ರಮಾಣ ಪತ್ರವನ್ನು ಸಂಬಂಧಿಸಿದ ಅಧಿಕಾರಿಗಳಿಂದ ವಿತರಿಸಿದಂತಾಗಿರಬೇಕು ಮತ್ತು ವಿತರಿಸಿದ ದಿನಾಂಕವು 1ನೇ ಜುಲೈ 2014 ರ ನಂತರದ್ದಾಗಿರಬೇಕು.** ಜಾತಿ ಪ್ರಮಾಣ ಪತ್ರಗಳಲ್ಲಿ ಯಾವುದೇ ಅನರ್ಹತೆಗಳು ಕಂಡು ಬಂದರೆ,

ಅಂತಹ ಅರ್ಜಿಗಳನ್ನು ಕೆಎಸ್ಇಟಿ ಕೇಂದ್ರವು ಯಾವುದೇ ಹಂತದಲ್ಲಾದರೂ ತಿರಸ್ಕರಿಸಲಾಗುವುದು, ಹಾಗೂ ಅಂತಹ ಅಭ್ಯರ್ಥಿಗಳ ಮೇಲೆ ಕಾನೂನು ಕ್ರಮ ಜರುಗಿಸಲಾಗುವುದು.

6. ಅಭ್ಯರ್ಥಿಗಳು ಮುಖ್ಯವಾಗಿ ಗಮನಿಸಬೇಕಾದ ಅಂಶವೇನೆಂದರೇ ಅವರ ಅಭ್ಯರ್ಥಿತನವು ತಾತ್ಕಾಲಿಕವೆಂದು ತಿಳಿದುಕೊಳ್ಳತಕ್ಕದ್ದು. ಪ್ರವೇಶಾತಿ ಪತ್ರವು ಪಡೆದಾಕ್ಷಣ ಕೆಎಸ್ಇಟಿ ಕೇಂದ್ರವು ಅವರನ್ನು ಅಭ್ಯರ್ಥಿಯಾಗಿ ಅರ್ಹರೆಂದು ಪರಿಗಣಿಸಿದೆ ಎಂದು ತಿಳಿಯಬಾರದು. ಅಭ್ಯರ್ಥಿಗಳ ಅರ್ಹತಾ ನಿಬಂಧನೆಗಳನ್ನು ಪರೀಶೀಲಿಸಿದ ನಂತರ ಅವರ ಅಭ್ಯರ್ಥಿತನವನ್ನು ಪರಿಗಣಿಸಲಾಗುವುದು.

**ವಯೋಮಿತಿ:**

1. **ಕರ್ನಾಟಕ ರಾಜ್ಯ ಉಪನ್ಯಾಸಕ ಅರ್ಹತಾ ಪರೀಕ್ಷೆ ತೆಗೆದುಕೊಳ್ಳಲು ಗರಿಷ್ಠ ವಯೋಮಿತಿ ಇರುವುದಿಲ್ಲ.**

**ವಿನಾಯಿತಿ**

1. ಕರ್ನಾಟಕ ರಾಜ್ಯದಲ್ಲಿ ಉಪನ್ಯಾಸಕರ (ಸಹಾಯಕ ಪ್ರಾಧ್ಯಾಪಕರು) ಹುದ್ದೆಗೆ ವಿಶ್ವವಿದ್ಯಾನಿಲಯ/ ಕಾಲೇಜುಗಳು/ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ (ಸರ್ಕಾರಿ/ ಅನುದಾನಿತ/ ಖಾಸಗಿ) ನೇಮಕವಾಗಬೇಕಾದರೆ, ಅಭ್ಯರ್ಥಿಗಳು ಕಡ್ಡಾಯವಾಗಿ ಕೆಎಸ್ಇಟಿ ಅಥವಾ ಎನ್.ಇ.ಟಿ ಪರೀಕ್ಷೆಯಲ್ಲಿ ಅರ್ಹತೆ ಪಡೆದಿರಬೇಕೆಂಬ ನಿಯಮವಿದೆ.
   - ಅ. ಯು.ಜಿ.ಸಿ ಮಾರ್ಗಸೂಚಿ ಪ್ರಕಾರ, ಯು.ಜಿ.ಸಿ 2009ರ ನಿಬಂದನೆಯ ಪ್ರಕಾರ ಪಿ.ಹೆಚ್.ಡಿ ಪದವಿ ಪಡೆದ ಅಭ್ಯರ್ಥಿಗಳಿಗೆ (minimum standards and procedures for award of Ph.D. Degree) ಕೆಎಸ್ಇಟಿ ಅಥವಾ ಎನ್.ಇ.ಟಿ ಅರ್ಹತೆ ಪಡೆಯಬೇಕೆಂಬ ನಿಯಮದಿಂದ ವಿನಾಯಿತಿ ಇದೆ.
   - ಆ. ಅಭ್ಯರ್ಥಿಯು 1989ರ ಮುಂಚಿತವಾಗಿ ಯು.ಜಿ.ಸಿ–ನೆಟ್ / ಸಿ.ಎಸ್.ಐ.ಆರ್–ನೆಟ್, ಜೆ.ಆರ್.ಎಫ್ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿದ್ದಲ್ಲಿ ಅಂತಹವರಿಗೆ ಕೆಎಸ್ಇಟಿ ಪರೀಕ್ಷೆಯಿಂದ ವಿನಾಯಿತಿ ನೀಡಲಾಗಿದೆ.

**ಪರೀಕ್ಷಾ ಶುಲ್ಕ ಮತ್ತು ಪಾವತಿಸುವ ವಿಧಾನ**

ಕೆಎಸ್ಇಟಿ ಪರೀಕ್ಷೆಗೆ ಈ ಕೆಳಕಂಡಂತೆ ಪರೀಕ್ಷಾ ಶುಲ್ಕವನ್ನು ನಿಗದಿಪಡಿಸಲಾಗಿದೆ.

| | |
|---|---|
| ಸಾಮಾನ್ಯ ವರ್ಗ | ರೂ. 1000/- |
| ಪ್ರವರ್ಗ- IIA, IIB, IIIA, IIIB | ರೂ. 800/- |
| ಪ್ರವರ್ಗ- I, SC, ST, PWD (VH/PH) | ರೂ. 500/- |

ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಯನ್ನು ನಿಗಧಿತ ಅವಧಿ ಮುಗಿದ ನಂತರ ಸಲ್ಲಿಸಲು ರೂ. 100/- ದಂಡಶುಲ್ಕದೊಂದಿಗೆ ಹೆಚ್ಚುವರಿ ಅವಧಿಯವರೆಗೆ ಪಾವತಿಸಬಹುದು.

**ಸೂಚನೆ:** Cat-I, IIA, IIB, IIIA, IIIB, SC, ST, PWD (VH/PH), ಗೆ ಸೇರಿದ ಅಭ್ಯರ್ಥಿಗಳು, ಅವರವರ ಜಾತಿ ಆಧಾರಕ್ಕೆ ಸಂಬಂಧಿಸಿದಂತೆ ಶುಲ್ಕವನ್ನು ಪಾವತಿಸಿ ಗೆಜೆಟೆಡ್ ಅಧಿಕಾರಿಗಳಿಂದ ಧೃಡೀಕರಿಸಿದ ಜಾತಿ ಪ್ರಮಾಣ ಪತ್ರದ ಪ್ರತಿಯನ್ನು ಅರ್ಜಿಯೊಂದಿಗೆ ಸಲ್ಲಿಸಬೇಕು.

**ಪಾವತಿಸುವ ವಿಧಾನ:**

ಅಭ್ಯರ್ಥಿಗಳು ಕೆಎಸ್ಇಟಿ ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಅರ್ಜಿಯನ್ನು ನೊಂದಾಯಿಸಿದ ನಂತರ ಭರ್ತಿ ಮಾಡಿದ ಬ್ಯಾಂಕ್ ಚಲನ್ ಮುದ್ರಿಸಿಕೊಂಡು (ಬ್ಯಾಂಕ್ ಚಲನ್ ಪ್ರತಿ, ಕೆಎಸ್ಇಟಿ ಚಲನ್ ಪ್ರತಿ, ಅಭ್ಯರ್ಥಿ ಪ್ರತಿ) ಚಲನ್‌ನಲ್ಲಿ ಸೂಚಿಸಿರುವ ಪರಿಕ್ಷಾ ಶುಲ್ಕ / ದಂಡ ಶುಲ್ಕವನ್ನು ಮತ್ತು ಬ್ಯಾಂಕ್ ಕಮೀಷನ್ ಹಣ ರೂ.20/-ರೊಂದಿಗೆ ಯಾವುದೇ SBM ಶಾಖೆಯಲ್ಲಿ ಪರೀಕ್ಷಾ ಶುಲ್ಕವನ್ನು ಪಾವತಿಸಬಹುದಾಗಿದೆ. ಅಭ್ಯರ್ಥಿಯು ಕೆಎಸ್ಇಟಿ ಚಲನ್ ಪತ್ರಿಯನ್ನು, ಮುದ್ರಿತ ಆನ್‌ಲೈನ್ ಅರ್ಜಿಯೊಂದಿಗೆ ಇತರ ದಾಖಲೆಗಳ ಸಹಿತ ಲಗತ್ತಿಸಿ, ಅಭ್ಯರ್ಥಿಯು ಆಯ್ಕೆಮಾಡಿದ ಪರೀಕ್ಷಾ ಕೇಂದ್ರದ ನೋಡಲ್ ಅಧಿಕಾರಿಯವರಿಗೆ ಸಲ್ಲಿಸಬೇಕು.

**ಸೂಚನೆ**

1. **ಬೇರೆ ಯಾವುದೇ ವಿಧಾನದ ಮೂಲಕ ಶುಲ್ಕ ಪಾವತಿಸಲು ಅವಕಾಶವಿರುವುದಿಲ್ಲ (Money Order, Demand Draft, IPO etc.,).**

2. **ಒಮ್ಮೆ ಶುಲ್ಕ ಪಾವತಿಸಿದ ನಂತರ, ಯಾವುದೇ ಕಾರಣಕ್ಕೂ ಹಣವನ್ನು ಹಿಂದಿರುಗಿಸಲಾಗುವುದಿಲ್ಲ.**

**ಪರೀಕ್ಷಾ ವಿಧಾನ**

ಕೆಎಸ್ಇಟಿ ಪರೀಕ್ಷೆಯಲ್ಲಿ ಮೂರು ಪ್ರಶ್ನೆಪತ್ರಿಕೆಗಳಿರುತ್ತವೆ. ಮೂರು ಪತ್ರಿಕೆಗಳು ಬಹುಸಂಖ್ಯಾ ಆಯ್ಕೆ ಪ್ರಶ್ನೆಗಳಾಗಿರುತ್ತವೆ. ಪರೀಕ್ಷೆಯು **ದಿನಾಂಕ: 06ನೇ ಡಿಸೆಂಬರ್, 2015** ರಂದು ಎರಡು ಅವಧಿಗಳಲ್ಲಿ ಈ ಕೆಳಕಂಡಂತೆ ನಡೆಯುವುದು.

| | **ಪತ್ರಿಕೆ** | **ಅಂಕಗಳು** | **ಪ್ರಶ್ನೆಗಳ ಸಂಖ್ಯೆ** | **ಅವಧಿ** |
|---|---|---|---|---|
| **ಮೊದಲನೇ ಅವಧಿ** | I | 100 | 60 ಪ್ರಶ್ನೆಗಳಲ್ಲಿ 50ಕ್ಕೆ ಉತ್ತರಿಸಿ | 1.15 ಗಂಟೆ (ಪೂರ್ವಾಹ್ನ 09.30 ದಿಂದ 10.45 ರವರೆಗೆ) |
| | II | 100 | 50 ಪ್ರಶ್ನೆಗಳು ಕಡ್ಡಾಯವಾಗಿರುತ್ತದೆ | 1.15 ಗಂಟೆ (ಪೂರ್ವಾಹ್ನ 11.00 ದಿಂದ 12.15 ರವರೆಗೆ) |
| **ಎರಡನೇ ಅವಧಿ** | III | 150 | 75 ಪ್ರಶ್ನೆಗಳು ಕಡ್ಡಾಯವಾಗಿರುತ್ತದೆ | 2.30 ಗಂಟೆ (ಅಪರಾಹ್ನ 01.30 ದಿಂದ 04.00 ರವರೆಗೆ) |

**ಪತ್ರಿಕೆ–I: ಸಾಮಾನ್ಯ ಪತ್ರಿಕೆಯು ಬೋಧನೆ ಮತ್ತು ಬುದ್ದಿ ಸಾಮಾರ್ಥ್ಯಕ್ಕನುಗುಣವಾಗಿರುತ್ತದೆ.**

- ಈ ಪತ್ರಿಕೆಯು ಅಭ್ಯರ್ಥಿಗಳ ಸಾಮಾನ್ಯ ಪತ್ರಿಕೆಯಾಗಿದ್ದು, ಸಾಮಾನ್ಯ ಜ್ಞಾನ, ಬೋಧನೆ ಹಾಗೂ ಸಂಶೋಧನೆಯ ಅಭಿರುಚಿಗೆ ಸಂಬಂಧಿಸಿರುತ್ತದೆ. ಅಭ್ಯರ್ಥಿಗಳ ಸಾಮಾನ್ಯ ತಿಳಿವಳಿಕೆಗಳನ್ನು ಗ್ರಹಿಸುವ ಹಾಗೂ ಯೋಚನಾ ಸಾಮರ್ಥ್ಯವನ್ನು ಅಳೆಯುವಂತಹದ್ದಾಗಿರುತ್ತದೆ. ಈ ಪತ್ರಿಕೆಯಲ್ಲಿ 60 ಬಹುಸಂಖ್ಯಾ ಆಯ್ಕೆಯ ಪ್ರಶ್ನೆಗಳಿರುತ್ತದೆ. ಪ್ರತಿ ಪ್ರಶ್ನೆಗೆ ಎರಡು ಅಂಕಗಳಿರುತ್ತದೆ, ಹಾಗೂ ಈ ಪ್ರಶ್ನೆಗಳಲ್ಲಿ ಯಾವುದಾದರೂ 50 ಪ್ರಶ್ನೆಗಳಿಗೆ ಅಭ್ಯರ್ಥಿಯು ಉತ್ತರಿಸಬಹುದು. ಅಭ್ಯರ್ಥಿಗಳು, 50 ಕ್ಕೂ ಹೆಚ್ಚು ಪ್ರಶ್ನೆಗಳಿಗೆ ಉತ್ತರಿಸಿದ್ದಲ್ಲಿ, ಮೊದಲ 50 ಪ್ರಶ್ನೆಗೆ ಉತ್ತರಿಸಿದವುಗಳನ್ನು ಮಾತ್ರ ಮೌಲ್ಯಮಾಪನ ಮಾಡಲಾಗುವುದು. ಎಣಿಕೆಯ ಸಂಧರ್ಭದಲ್ಲಿ ಒಂದು ವೇಳೆ Grace ಅಂಕಗಳನ್ನು ನೀಡಿದ್ದರೆ, Grace ಅಂಕ ನೀಡಿದ ಪ್ರಶ್ನೆಗಳನ್ನು ಸೇರಿಸಿ ಮೊದಲ 50 ಪ್ರಶ್ನೆಗಳನ್ನು ಪರಿಗಣಿಸಲಾಗುವುದು. Grace ಅಂಕ ನೀಡಿದ ಪ್ರಶ್ನೆಗಳನ್ನು ಉತ್ತರಿಸದೇ ಇರುವವರಿಗೂ ಸಹ Grace ಅಂಕಗಳನ್ನು ನೀಡಲಾಗುತ್ತದೆ.

**ಪತ್ರಿಕೆ–II : ವಿಷಯ ಪತ್ರಿಕೆ.**

ಅಭ್ಯರ್ಥಿಯು ಆಯ್ಕೆ ಮಾಡಿದ ವಿಷಯದ ಸಾಮಾನ್ಯ ಜ್ಞಾನದಲ್ಲಿ ಈ ಪತ್ರಿಕೆಯು ಇರುತ್ತದೆ. ಈ ಪತ್ರಿಕೆಯು 50 ಕಡ್ಡಾಯ ಬಹುಸಂಖ್ಯಾ ಆಯ್ಕೆ ತರಹದ್ದಾಗಿದ್ದು, ಪ್ರತಿ ಪ್ರಶ್ನೆಗೂ 2 ಅಂಕಗಳಿರುತ್ತದೆ. ಗರಿಷ್ಠ 100 ಅಂಕಗಳಿರುತ್ತವೆ.

**ಪತ್ರಿಕೆ–III ವಿಷಯ ಪತ್ರಿಕೆ (ಪ್ರಶ್ನೆಗಳು ವಿಷಯದ ಆಳವಿಚಾರಕ್ಕೆ ಸಂಬಂಧಿಸಿದವುಗಳಾಗಿರುತ್ತದೆ.)**

ಅಭ್ಯರ್ಥಿಯು ಆಯ್ಕೆ ಮಾಡಿದ ವಿಷಯದಲ್ಲಿ ಆಳವಾಧ ಜ್ಞಾನವನ್ನು ಒಳಗೊಂಡಂತೆ ಈ ಪತ್ರಿಕೆಯಲ್ಲಿ 75 ಬಹುಸಂಖ್ಯಾ ಆಯ್ಕೆ ಪ್ರಶ್ನೆಗಳಿರುತ್ತವೆ. ಪ್ರತಿಯೊಂದು ಪ್ರಶ್ನೆಗಳು ಕಡ್ಡಾಯವಾಗಿದ್ದು, ಪ್ರತಿ ಪ್ರಶ್ನೆಗಳು ಎರಡು ಅಂಕಗಳನ್ನು ಒಳಗೊಂಡಿರುತ್ತದೆ. ಗರಿಷ್ಠ 150 ಅಂಕಗಳಿರುತ್ತವೆ.

**ಕೆಎಸ್‌ಇಟಿ ಪರೀಕ್ಷೆಯ ಫಲಿತಾಂಶ ಪ್ರಕಟಣೆ ವಿಧಾನ:**

ಅಭ್ಯರ್ಥಿಗಳು ಕೆಎಸ್‌ಇಟಿ ಪರೀಕ್ಷೆಯಲ್ಲಿ ಅರ್ಹತೆ ಪಡೆಯುವ ಸಲುವಾಗಿ **ಫಲಿತಾಂಶ ಪ್ರಕಟಣೆಯು, ಈ ಕೆಳಕಂಡ ಹಂತಗಳನ್ನು ಒಳಗೊಂಡಿರುತ್ತದೆ.**

**ಹಂತ I:** ಅಭ್ಯರ್ಥಿಗಳು ಈ ಕೆಳಕಂಡ ಕನಿಷ್ಠ ಅಂಕಗಳನ್ನು ಪತ್ರಿಕೆ– I, ಪತ್ರಿಕೆ– II ಮತ್ತು ಪತ್ರಿಕೆ– III ರಲ್ಲಿ ಪಡೆದಿರಬೇಕು.

| ವರ್ಗ | ನಿಗದಿತ ಪ್ರತಿ ಪತ್ರಿಕೆಯಲ್ಲಿ ಪಡೆಯಬೇಕಾದ ಕನಿಷ್ಠ ಅರ್ಹತಾ ಅಂಕಗಳು | | |
|---|---|---|---|
| | **ಪತ್ರಿಕೆ–I** | **ಪತ್ರಿಕೆ–II** | **ಪತ್ರಿಕೆ–III** |
| ಸಾಮಾನ್ಯ ವರ್ಗ | 40(40%) | 40(40%) | 75(50%) |
| ಎಸ್.ಸಿ/ಎಸ್.ಟಿ/ವಿಕಲಚೇತನರು(ಪಿಡಬ್ಲ್ಯೂಡಿ) ಪ್ರವರ್ಗ– I, IIA, IIB,IIIA,IIIB | 35(35%) | 35(35%) | 60(40%) |

**ಹಂತ II:** ಮೊದಲನೇ ಹಂತದಲ್ಲಿ ಕನಿಷ್ಠ ಅಂಕಗಳನ್ನು ಪಡೆದವರ, 3 ಪತ್ರಿಕೆಗಳ ಅಂಕಗಳ ಮೊತ್ತವನ್ನು (ಶೇಕಡಾವಾರು ಅಂಕಗಳನ್ನು) ಪರಿಗಣಿಸಿ, ಎಲ್ಲಾ ಅಭ್ಯರ್ಥಿಗಳನ್ನೊಳಗೊಂಡಂತೆ ವಿಷಯವಾರು ಹಾಗೂ ಪ್ರವರ್ಗವಾರು ಮೆರಿಟ್ ಪಟ್ಟಿಯನ್ನು ತಯಾರಿಸಲಾಗುತ್ತದೆ.

**ಹಂತ III:** ಹಂತ ಎರಡರಲ್ಲಿ ತಯಾರಿಸಿದ ಅಭ್ಯರ್ಥಿಗಳ ಮೆರಿಟ್ ಪಟ್ಟಿಯನ್ನು ಆಧರಿಸಿ, ಮೊದಲ ಶೇಕಡ 15% ರಷ್ಟು (ಪ್ರತಿ ವಿಷಯವಾರು ಹಾಗೂ ಪ್ರತಿ ಪ್ರವರ್ಗವಾರು ಪರಿಗಣಿಸಿ) ಅಭ್ಯರ್ಥಿಗಳನ್ನು ಕೆಎಸ್‌ಇಟಿ ಉಪನ್ಯಾಸಕರ ಪರೀಕ್ಷೆಯಲ್ಲಿ ಅರ್ಹತೆ ಹೊಂದಿರುತ್ತಾರೆಂದು ಘೋಷಿಸಲಾಗುತ್ತದೆ.

**ಈ ಮೇಲೆ ತಿಳಿಸಿದ ಫಲಿತಾಂಶ ಪ್ರಕಟಣೆಯ ವಿಧಾನವು ಅಂತಿಮವಾಗಿದ್ದು, ಈ ವಿಧಾನವು ಕೆಎಸ್‌ಇಟಿ ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.**

**ಕೆಎಸ್‌ಇಟಿ ಪಠ್ಯಕ್ರಮ ಮತ್ತು ಪ್ರಶ್ನೆ ಪತ್ರಿಕೆ:**

ಅ) **ಪರೀಕ್ಷಾ ಪಠ್ಯಕ್ರಮ:** ಕೆಎಸ್‌ಇಟಿ ಪರೀಕ್ಷಾ ಪಠ್ಯಕ್ರಮವು, ಯು.ಜಿ.ಸಿ/ ಸಿ.ಎಸ್.ಐ.ಆರ್. ನೆಟ್ ನಿಗಡಿಪಡಿಸಿರುವ ಪಠ್ಯಕ್ರಮದ ಮಾದರಿಯಲ್ಲೇ ಇರುತ್ತದೆ. ಎಲ್ಲಾ ವಿಷಯಗಳ ಪಠ್ಯಕ್ರಮವನ್ನು ಮೈಸೂರು ವಿಶ್ವವಿದ್ಯಾನಿಲಯದ ವೆಬ್‌ಸೈಟ್: http://kset.uni-mysore.ac.in ನಿಂದ Download ಮಾಡಿಕೊಳ್ಳಬಹುದು. ಕೆಎಸ್‌ಇಟಿ ಕೇಂದ್ರವು ವಿಷಯಗಳ ಪಠ್ಯಕ್ರಮವನ್ನು ಅಭ್ಯರ್ಥಿಗಳಿಗೆ ಪ್ರತ್ಯೇಕವಾಗಿ ಕಳುಹಿಸಲಾಗುವುದಿಲ್ಲ.

ಬಿ) **ಕನ್ನಡ ಮತ್ತು ಇಂಗ್ಲೀಷ್ ಆವೃತ್ತಿಗಳ ಪ್ರಶ್ನೆ ಪತ್ರಿಕೆಗಳಲ್ಲಿ ಯಾವುದೇ ರೀತಿಯ ವ್ಯತ್ಯಾಸಗಳು ಕಂಡುಬಂದಲ್ಲಿ, ಇಂಗ್ಲೀಷ್ ಆವೃತ್ತಿಗಳಲ್ಲಿರುವುದೇ ಅಂತಿಮವೆಂದು ಪರಿಗಣಿಸಬೇಕು.**

**ವಿಷಯಗಳು:**

ಕೆ.ಎಸ್.ಇ.ಟಿ ಪರೀಕ್ಷೆಯು 32 ವಿಷಯಗಳಲ್ಲಿ ನಡೆಯಲಿದ್ದು, ಅವುಗಳ ಪ್ರಶ್ನೆ ಪತ್ರಿಕೆಯು ಕನ್ನಡ ಮತ್ತು ಆಂಗ್ಲ ಅಥವಾ ಆಂಗ್ಲ, ಹಾಗೂ ಆಯಾ ಭಾಷಾ ಮಾಧ್ಯಮದಲ್ಲಿರುತ್ತದೆ. 32 ವಿಷಯಗಳು ಮತ್ತು ವಿಷಯಗಳ ಕೋಡ್ ಪಟ್ಟಿ ಈ ಕೆಳಕಂಡಂತಿದೆ.

| **ವಿಷಯದ ಕೋಡ್** | **ವಿಷಯ** | **ಪ್ರಶ್ನೆಪತ್ರಿಕೆಯ ಮಾಧ್ಯಮ** |
|---|---|---|
| 01 | ವಾಣಿಜ್ಯಶಾಸ್ತ್ರ | ಕನ್ನಡ ಮತ್ತು ಆಂಗ್ಲಭಾಷೆ |
| 02 | ಕನ್ನಡ | ಕನ್ನಡಭಾಷೆ |
| 03 | ಅರ್ಥಶಾಸ್ತ್ರ # | ಕನ್ನಡ ಮತ್ತು ಆಂಗ್ಲಭಾಷೆ |
| 04 | ಇಂಗ್ಲೀಷ್ | ಆಂಗ್ಲಭಾಷೆ |
| 05 | ರಾಜ್ಯಶಾಸ್ತ್ರ | ಕನ್ನಡ ಮತ್ತು ಆಂಗ್ಲಭಾಷೆ |
| 06 | ಇತಿಹಾಸ # | ಕನ್ನಡ ಮತ್ತು ಆಂಗ್ಲಭಾಷೆ |
| 07 | ಸಮಾಜಶಾಸ್ತ್ರ | ಕನ್ನಡ ಮತ್ತು ಆಂಗ್ಲಭಾಷೆ |
| 08 | ಭೂಗೋಳಶಾಸ್ತ್ರ | ಕನ್ನಡ ಮತ್ತು ಆಂಗ್ಲಭಾಷೆ |
| 09 | ಹಿಂದಿ | ಹಿಂದಿಭಾಷೆ |
| 10 | ನಿರ್ವಹಣೆ (ಮ್ಯಾನೇಜ್‌ಮೆಂಟ್) # | ಕನ್ನಡ ಮತ್ತು ಆಂಗ್ಲಭಾಷೆ |
| 11 | ಪ್ರವಾಸೋದ್ಯಮ ಮತ್ತು ಆಡಳಿತ | ಕನ್ನಡ ಮತ್ತು ಆಂಗ್ಲಭಾಷೆ |
| 12 | ಶಿಕ್ಷಣ | ಕನ್ನಡ ಮತ್ತು ಆಂಗ್ಲಭಾಷೆ |
| 13 | ಗ್ರಂಥಾಲಯ ಹಾಗೂ ಮಾಹಿತಿ ವಿಜ್ಞಾನ | ಆಂಗ್ಲಭಾಷೆ |
| 14 | ಸಂವಹನ ಮತ್ತು ಪತ್ರಿಕೋದ್ಯಮ | ಕನ್ನಡ ಮತ್ತು ಆಂಗ್ಲಭಾಷೆ |
| 15 | ಮನೋವಿಜ್ಞಾನ | ಕನ್ನಡ ಮತ್ತು ಆಂಗ್ಲಭಾಷೆ |
| 16 | ಸಮಾಜ ಕಾರ್ಯ | ಕನ್ನಡ ಮತ್ತು ಆಂಗ್ಲಭಾಷೆ |
| 17 | ಅಪರಾಧ ಶಾಸ್ತ್ರ | ಕನ್ನಡ ಮತ್ತು ಆಂಗ್ಲಭಾಷೆ |
| 18 | ಕಾನೂನು | ಕನ್ನಡ ಮತ್ತು ಆಂಗ್ಲಭಾಷೆ |
| 19 | ಸಂಸ್ಕೃತ | ಸಂಸ್ಕೃತಭಾಷೆ |
| 20 | ದೈಹಿಕ ಶಿಕ್ಷಣ | ಕನ್ನಡ ಮತ್ತು ಆಂಗ್ಲಭಾಷೆ |
| 21 | ಜನಪದ ಸಾಹಿತ್ಯ | ಕನ್ನಡ ಮತ್ತು ಆಂಗ್ಲಭಾಷೆ |
| 22 | ಉರ್ದು | ಉರ್ದುಭಾಷೆ |

| | | |
|---|---|---|
| 23 | ಸಾರ್ವಜನಿಕ ಆಡಳಿತ | ಕನ್ನಡ ಮತ್ತು ಆಂಗ್ಲಭಾಷೆ |
| 24 | ಗಣಕ ವಿಜ್ಞಾನ ಮತ್ತು ಅನ್ವಯ | ಆಂಗ್ಲಭಾಷೆ |
| 25 | ಭೌತ ವಿಜ್ಞಾನಗಳು * | ಆಂಗ್ಲಭಾಷೆ |
| 26 | ಗಣಿತ ವಿಜ್ಞಾನಗಳು** | ಆಂಗ್ಲಭಾಷೆ |
| 27 | ರಸಾಯನಿಕ ವಿಜ್ಞಾನಗಳು*** | ಆಂಗ್ಲಭಾಷೆ |
| 28 | ಜೀವ ವಿಜ್ಞಾನಗಳು**** | ಆಂಗ್ಲಭಾಷೆ |
| 29 | ಪರಿಸರ ವಿಜ್ಞಾನ | ಆಂಗ್ಲಭಾಷೆ |
| 30 | ಗೃಹ ವಿಜ್ಞಾನ | ಆಂಗ್ಲಭಾಷೆ |
| 31 | ವಿದ್ಯುನ್ಮಾನ ವಿಜ್ಞಾನ | ಆಂಗ್ಲಭಾಷೆ |
| 32 | ಭೂ ವಿಜ್ಞಾನ ***** | ಆಂಗ್ಲಭಾಷೆ |

**ಸೂಚನೆ:** * ಭೌತಶಾಸ್ತ್ರ/ಎಲೆಕ್ಟ್ರಾನಿಕ್ಸ್/ ಪರಮಾಣು ಮತ್ತು ಅಣು ಭೌತವಿಜ್ಞಾನ/ ಕ್ಲಾಸಿಕಲ್ ಡೈನಾಮಿಕ್ಸ್/ಕಂಡೆನ್ಸಡ್ ಮ್ಯಾಟರ್ ಫಿಜಿಕ್ಸ್/ಎಲೆಕ್ಟ್ರೋಮ್ಯಾಗ್ನೆಟಿಕ್/ ಎಕ್ಸ್‌ಪಿರಿಮೆಂಟಲ್ ಡಿಸೈನ್/ ನ್ಯೂಕ್ಲಿಯರ್, ಸ್ಪೇಸ್ ಅಂಡ್ ಪ್ರಾಕ್ಟೀಕಲ್ ಫಿಜಿಕ್ಸ್/ ಕ್ವಾಂಟಮ್ ಫಿಜಿಕ್ಸ್/ ಥೆರ್ಮೋಡೈನಾಮಿಕ್ಸ್, ಅಸ್ಟ್ರೋನಾಮಿ, ಆಸ್ಟ್ರೋಫಿಜಿಕ್ಸ್ ಮತ್ತು ಇತರೆ ಸಂಬಂಧಿಸಿದ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಪೂರೈಸಿರುವ ಅಥವಾ ಅಂತಿಮ ವರ್ಷದ ಪರೀಕ್ಷೆಗೆ ಕುಳಿತಿರುವ ಅಭ್ಯರ್ಥಿಗಳು ಕೆಎಸ್‌ಇಟಿ ಪರೀಕ್ಷೆಯನ್ನು **'ಭೌತವಿಜ್ಞಾನ'** ದಲ್ಲಿ ತೆಗೆದುಕೊಳ್ಳಬಹುದು.

** ಯಾವ ಅಭ್ಯರ್ಥಿಗಳು ಶುದ್ಧಗಣಿತವಿಜ್ಞಾನ/ಸಂಖ್ಯಾಶಾಸ್ತ್ರ/ಆನ್ವಯಿಕ ಗಣಿತ ವಿಜ್ಞಾನ/ಗಣಿತ ಮತ್ತು ಗಣಕ ವಿಜ್ಞಾನ ಮತ್ತು ಇತರೆ ಸಂಬಂಧಿಸಿದ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಪೂರೈಸಿರುವ ಅಥವಾ ಅಂತಿಮ ವರ್ಷದ ಪರೀಕ್ಷೆಗೆ ಕುಳಿತಿರುವ ಅಭ್ಯರ್ಥಿಗಳು ಕೆಎಸ್‌ಇಟಿ ಪರೀಕ್ಷೆಯನ್ನು **'ಗಣಿತ ವಿಜ್ಞಾನ'** ದಲ್ಲಿ ತೆಗೆದುಕೊಳ್ಳಬಹುದು.

*** ರಾಸಾಯನಿಕವಿಜ್ಞಾನಗಳು/ ವಿಶ್ಲೇಷಣಾತ್ಮಕರಾಸಾಯನ ವಿಜ್ಞಾನ/ಇನಾರ್ಗ್ಯಾನಿಕ್ (ನಿರವಯುವ)/ ರಾಸಾಯನ ವಿಜ್ಞಾನ/ ಆರ್ಗ್ಯಾನಿಕ್ (ಸಾವಯುವ) ರಾಸಾಯನ ವಿಜ್ಞಾನ/ ಭೌತ ರಾಸಾಯನ ವಿಜ್ಞಾನ/ ಮೆಡಿಸಿನಲ್ ಕೆಮಿಸ್ಟ್ರಿ/ ಅನ್ವಯಿಕ ರಾಸಾಯನ ಶಾಸ್ತ್ರ/ ನೂಕ್ಲಿಯರ್ ಕೆಮಿಸ್ಟ್ರಿ/ ಪರಿಸರ ರಸಾಯನ ಶಾಸ್ತ್ರ/ ಮೆರೈನ್ ಕೆಮಿಸ್ಟ್ರಿ/ ಪರ್ಮಾಸಿಟಿಕಲ್ ಕೆಮಿಸ್ಟ್ರಿ/ ಬಯೋ-ಆರ್ಗಾನಿಕ್ ಕೆಮಿಸ್ಟ್ರಿ ಮತ್ತು ಇತರೆ ಸಂಬಂಧಿಸಿದ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಪೂರೈಸಿರುವ ಅಥವಾ ಅಂತಿಮ ವರ್ಷದ ಪರೀಕ್ಷೆಗೆ ಕುಳಿತಿರುವ ಅಭ್ಯರ್ಥಿಗಳು ಕೆಎಸ್‌ಇಟಿ ಪರೀಕ್ಷೆಯನ್ನು **'ರಾಸಾಯನಿಕ ವಿಜ್ಞಾನ'** ದಲ್ಲಿ ತೆಗೆದುಕೊಳ್ಳಬಹುದು.

**** ಜೀವ ರಾಸಾಯನ ವಿಜ್ಞಾನ/ ಜೀವ ವಿಜ್ಞಾನ/ಜೈವಿಕ ತಂತ್ರಜ್ಞಾನ/ಜೀವವೈವಿಧ್ಯತೆ ಮತ್ತು Taxonomy/ಸಸ್ಯವಿಜ್ಞಾನ/Genetic/ಮೈಕ್ರೋಬಯಾಲಜಿ/Physiology/ಪ್ರಾಣಿವಿಜ್ಞಾನ/ ಫಿಶರಿಸೈನ್ಸ್/ಅನಿಮಲ್ ಬಯೋಲಾಜಿ/ಮೆರೈನ್ ಬಯೋಲಾಜಿ/ಅಪ್ಲೈಡ್ ಜೆನೆಟಿಕ್ಸ್ ಮತ್ತು ಸಂಬಂಧಿಸಿದ ಇತರೆ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಪೂರೈಸಿರುವ ಅಥವಾ ಅಂತಿಮ ವರ್ಷದ ಪರೀಕ್ಷೆಗೆ ಕುಳಿತಿರುವ ಅಭ್ಯರ್ಥಿಗಳು ಕೆಎಸ್‌ಇಟಿ ಪರೀಕ್ಷೆಯನ್ನು **'ಜೈವಿಕ ವಿಜ್ಞಾನ'** ದಲ್ಲಿ ತೆಗೆದುಕೊಳ್ಳಬಹುದು.

***** ಭೂ ವಿಜ್ಞಾನ/ಅನ್ವಯಿಕ ಭೂವಿಜ್ಞಾನ/ಭೂ ಭೌತವಿಜ್ಞಾನ (ಜಿಯೋ ಫಿಸಿಕ್ಸ್)/ ಹವಾಮಾನ ವಿಜ್ಞಾನ/ಸಾಗರ ವಿಜ್ಞಾನ/ಫಿಜಿಕಲ್ ಜಿಯೋಗ್ರಾಫಿ/ಎಂ.ಎಸ್.ಜಿಯೋಲಾಜಿ/ ಭೂವಿಜ್ಞಾನ ಸಂಪನ್ಮೂಲ ಮತ್ತು ಸಾಗರ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ/ ಪೆಟ್ರೋಲಿಯಂ ಜಿಯೋಲಾಜಿ/ಜಿಯೋಇನ್‌ಫಾರ್‌ಮ್ಯಾಟಿಕ್ಸ/ ಅಪ್ಲೈಡ್ ಜಿಯೋಕೆಮಿಸ್ಟ್ರಿ/ ಮತ್ತು ಸಂಬಂಧಿಸಿದ ಇತರೆ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಪೂರೈಸಿರುವ ಅಥವಾ ಅಂತಿಮ ವರ್ಷದ ಪರೀಕ್ಷೆಗೆ ಕುಳಿತಿರುವ ಅಭ್ಯರ್ಥಿಗಳು ಕೆಎಸ್‌ಇಟಿ ಪರೀಕ್ಷೆಯನ್ನು **'ಭೂ ವಿಜ್ಞಾನ'** ದಲ್ಲಿ ತೆಗೆದುಕೊಳ್ಳಬಹುದು.

# ಅರ್ಥಶಾಸ್ತ್ರ, ಇತಿಹಾಸ ಮತ್ತು ನಿರ್ವಹಣೆ (ಮ್ಯಾನೇಜ್‌ಮೆಂಟ್) ವಿಷಯದಲ್ಲಿ ಮತ್ತು ಇವುಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಎರಡು ವರ್ಷ ಅವಧಿಯ ಸ್ನಾತಕೋತ್ತರ ಪದವಿ ಅಥವಾ ತತ್ಸಮಾನ ಪದವಿ ಹೊಂದಿರುವವರು ಕೆಎಸ್‌ಇಟಿ ತೆಗೆದುಕೊಳ್ಳಬಹುದು.

ಸ್ನಾತಕೋತ್ತರ ಪದವಿಯ ಅಂತಿಮ ವರ್ಷದ ಪರೀಕ್ಷೆಯನ್ನು ತೆಗೆದುಕೊಳ್ಳುತ್ತಿರುವ/ ತೆಗೆದುಕೊಂಡಿರುವಂತಹ ಅಭ್ಯರ್ಥಿಗಳು ಸಹ ಕೆಎಸ್‌ಇಟಿ ಪರೀಕ್ಷೆಯನ್ನು ತೆಗೆದುಕೊಳ್ಳಬಹುದು. ಒಂದಕ್ಕಿಂತ ಹೆಚ್ಚು ಸ್ನಾತಕೋತ್ತರ ಪದವಿ ಪಡೆದಿರುವ ಅಭ್ಯರ್ಥಿಗಳು, ಒಮ್ಮೆಗೆ ಯಾವುದಾದರು ಒಂದು ವಿಷಯದಲ್ಲಿ ಮಾತ್ರ ಕೆಎಸ್‌ಇಟಿ ಪರೀಕ್ಷೆಯನ್ನು ತೆಗೆದುಕೊಳ್ಳಬಹುದು.

**ಪರೀಕ್ಷಾ ಕೇಂದ್ರಗಳು.**

ಕೆಎಸ್‌ಇಟಿ ಪರೀಕ್ಷೆಯನ್ನು ಈ ಕೆಳಕಂಡ 11 ಕೇಂದ್ರಗಳಲ್ಲಿ ಮಾತ್ರ ನಡೆಸಲಾಗುತ್ತದೆ, ಕೇಂದ್ರಗಳ ಕೋಡ್‌ಗಳನ್ನು ಕೇಂದ್ರದ ಹೆಸರಿನೊಂದಿಗೆ ಕೊಡಲಾಗಿದೆ. ಕೆಎಸ್‌ಇಟಿ ಪರೀಕ್ಷೆಯನ್ನು ತೆಗೆದುಕೊಳ್ಳುವ ಅಭ್ಯರ್ಥಿಗಳು ಯಾವುದಾದರೂ ಒಂದು ಪರೀಕ್ಷಾ ಕೇಂದ್ರವನ್ನು ಮಾತ್ರ ಆಯ್ಕೆ ಮಾಡಿಕೊಳ್ಳಬೇಕು.

| ಕ್ರ. ಸಂ | ಪರೀಕ್ಷಾ ಕೇಂದ್ರದ ಹೆಸರು | ಕೋಡ್ |
|---|---|---|
| 1 | ಬೆಂಗಳೂರು | 10 |
| 2 | ಬೆಳಗಾವಿ | 11 |
| 3 | ಬಳ್ಳಾರಿ | 12 |
| 4 | ವಿಜಯಪುರ | 13 |
| 5 | ದಾವಣಗೆರೆ | 14 |
| 6 | ಧಾರವಾಡ | 15 |
| 7 | ಕಲ್ಬುರ್ಗಿ | 16 |
| 8 | ಮಂಗಳೂರು | 17 |
| 9 | ಮೈಸೂರು | 18 |
| 10 | ಶಿವಮೊಗ್ಗ | 19 |
| 11 | ತುಮಕೂರು | 20 |

***<u>ಟಿಪ್ಪಣಿ:</u> ವಿದ್ಯಾರ್ಥಿಯು ಒಮ್ಮೆ ಪರೀಕ್ಷಾ ಕೇಂದ್ರವನ್ನು ಆಯ್ಕೆ ಮಾಡಿದ್ದ ಕೊನೆಯುದು ಹಾಗೂ ಪರೀಕ್ಷಾ ಕೇಂದ್ರಗಳ ಬದಲಾವಣೆಗೆ ಅವಕಾಶವಿರುವುದಿಲ್ಲ.***

## ಕೆಎಸ್‌ಇಟಿ ಪರೀಕ್ಷೆಗೆ ಸಂಪರ್ಕಿಸಬೇಕಾದ ವ್ಯಕ್ತಿಗಳ ಪಟ್ಟಿ

<table>
<tr><td colspan="2">ಪ್ರೊ.ಕೆ.ಎಸ್.ರಂಗಪ್ಪ<br>ಕುಲಪತಿಗಳು ಮತ್ತು ಚೇರ್‌ಮನ್, ಕೆ.ಎಸ್.ಇ.ಟಿ<br><br>ಪ್ರೊ.ಬಿ.ಬಸವಲಿಂಗು<br>ಸಂಯೋಜನಾಧಿಕಾರಿ, ಕೆ.ಎಸ್.ಇ.ಟಿ<br>ಮತ್ತು ಮೆಂಬರ್ ಸೆಕ್ರೆಟರಿ<br>ದೂರವಾಣಿ: 0821-2419202, 439, 426<br>ಕೆ.ಎಸ್.ಇ.ಟಿ ಕೇಂದ್ರ<br>ಪರೀಕ್ಷಾಭವನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-570 005.</td></tr>
<tr><td colspan="2">ಎಲ್ಲಾ ಕೇಂದ್ರಗಳ ನೋಡಲ್ ಅಧಿಕಾರಿಗಳು</td></tr>
<tr><td>1. ಬೆಂಗಳೂರು<br>ಪ್ರೊ.ಎನ್.ಷಡಕ್ಷರಸ್ವಾಮಿ<br>ಭೂವಿಜ್ಞಾನ ವಿಭಾಗ,<br>ಬೆಂಗಳೂರು ವಿಶ್ವವಿದ್ಯಾನಿಲಯ,<br>ಜ್ಞಾನ ಭಾರತಿ ಕ್ಯಾಂಪಸ್,<br>ಬೆಂಗಳೂರು. 560 056<br>ಮೋ: 9945514906, 9482554906,<br>email: nsswamy@rediffmail.com</td><td>2. ಬೆಳಗಾವಿ<br>ಪ್ರೊ.ಹೆಚ್.ವೈ.ಕಾಂಬ್ಳೆ,<br>ಡೀನ್, ವಾಣಿಜ್ಯ ಶಾಸ್ತ್ರ ಮತ್ತು ಮ್ಯಾನೇಜ್‌ಮೆಂಟ್ ಬೋಧನಾ ವಿಭಾಗ, ರಾಣಿ ಚೆನ್ನಮ್ಮ<br>ವಿಶ್ವವಿದ್ಯಾನಿಲಯ, NH-04, ಭೂತರಾಯನಹಟ್ಟಿ,<br>ಬೆಳಗಾವಿ- 591 196,<br>ಮೋ: 9448107161,ದೂರವಾಣಿ: 0831-2565220<br>email: hykamble@gmail.com</td></tr>
<tr><td>3. ಬಳ್ಳಾರಿ<br>ಪ್ರೊ.ಕೆ.ವಿ.ಪ್ರಸಾದ್<br>ಡೀನ್, ಗಣಿತ ವಿಜ್ಞಾನ ವಿಭಾಗ,<br>ವಿಜಯನಗರ ಶ್ರೀಕೃಷ್ಣದೇವರಾಯ<br>ವಿಶ್ವವಿದ್ಯಾನಿಲಯ, ಜ್ಞಾನ ಸಾಗರ ಕ್ಯಾಂಪಸ್,<br>ವಿನಾಯಕ ನಗರ, ಬಳ್ಳಾರಿ-583 104<br>ದೂರವಾಣಿ: 08392-242873,<br>ಮೋ.ನಂ: 9448687862<br>email: prasadkv2000@yahoo.co.in</td><td>4. ವಿಜಯಪುರ<br>ಪ್ರೊ. ಪಿ.ಜಿ. ತಡಸದ<br>ಮುಖ್ಯಸ್ಥರು, ಗ್ರಂಥಾಲಯ ಮತ್ತು ಮಾಹಿತಿ<br>ವಿಜ್ಞಾನ ಅಧ್ಯಯನ ವಿಭಾಗ,<br>ಜ್ಞಾನಶಕ್ತಿ ಕ್ಯಾಂಪಸ್,<br>ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾನಿಲಯ,<br>ತೊರವಿ, ವಿಜಯಪುರ -586 101<br>ದೂರವಾಣಿ: 08352-229012<br>ಮೊ.ನಂ: 9448180973<br>email: pgtadasad@gmail.com</td></tr>
<tr><td>5. ದಾವಣಗೆರೆ<br>ಪ್ರೊ.ಬಿ.ಬಕ್ಕಪ್ಪ<br>ನಿರ್ವಹಣೆ ಅಧ್ಯಯನದ ಪ್ರಾಧ್ಯಾಪಕರು,<br>ದಾವಣಗೆರೆ ವಿಶ್ವವಿದ್ಯಾನಿಲಯ,<br>ತೋಳಹುಣಸೆ,<br>ಶಿವಗಂಗೋತ್ರಿ, ದಾವಣಗೆರೆ-577 002,<br>ದೂರವಾಣಿ: 08192-208093,<br>ಮೋ.ನಂ: 9731297079<br>email: drbakkappa_b@yahoo.com</td><td>6.ಧಾರವಾಡ<br>ಪ್ರೊ. ಎಸ್.ಎನ್.ಅಗಡಿ<br>ನಿರ್ದೇಶಕರು, ಸ್ಟೂಡೆಂಟ್ ವೆಲ್ಫೇರ್ ವಿಭಾಗ,<br>ಕರ್ನಾಟಕ ವಿಶ್ವವಿದ್ಯಾನಿಲಯ,<br>ಪಾವಟೆ ನಗರ, ಧಾರವಾಡ- 580 003.<br>ದೂರವಾಣಿ: 0836-2215216, 2215200(O),<br>ಮೋ. ನಂ: 9964808768<br>email: directorswkud@gmail.com</td></tr>
</table>

| | |
|---|---|
| 7. ಕಲ್ಬುರ್ಗಿ<br>ಪ್ರೊ.ರಾಜ್‌ನಾಲ್ಕರ್ ಲಕ್ಷ್ಮಣ್<br>ವಾಣಿಜ್ಯ ಶಾಸ್ತ್ರ ವಿಭಾಗ,<br>ಗುಲ್ಬರ್ಗಾ ವಿಶ್ವವಿದ್ಯಾನಿಲಯ,<br>ಕಲ್ಬುರ್ಗಿ–585 106.<br>ಮೋ.ನಂ: 9448331800, 9538386777<br>email: drlaxman1964@gmail.co | 8. **ಮಂಗಳೂರು**<br>ಪ್ರೊ.ಪಿ.ಎ.ರೇಗೊ,<br>ಅರ್ಥಶಾಸ್ತ್ರ ವಿಭಾಗ,<br>ಮಂಗಳೂರು ವಿಶ್ವವಿದ್ಯಾನಿಲಯ,<br>ಮಂಗಳಗಂಗೋತ್ರಿ, ಮಂಗಳೂರು–574 199<br>ದೂರವಾಣಿ: 0824–2287372(O) 424(Fax)<br>ಮೋ.ನಂ: 9449592195<br>email:paulrego2005@yahoo.com |
| 9. **ಮೈಸೂರು**<br>ಪ್ರೊ. ಬಿ.ಬಸವಲಿಂಗು,<br>ಕೆಸೆಟ್ ಕೇಂದ್ರ, ಪರೀಕ್ಷಾ ಭವನ,<br>ಮೈಸೂರು ವಿಶ್ವವಿದ್ಯಾನಿಲಯ,<br>ಮೈಸೂರು–570 005,<br>ದೂರವಾಣಿ: 2419202, 439<br>email: bbkset2013@gmail.com | 10. **ಶಿವಮೊಗ್ಗ**<br>ಪ್ರೊ.ಬಿ.ಎಸ್. ಬಿರಾದರ್<br>ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ<br>ಅಧ್ಯಯನ ವಿಭಾಗ,<br>ಜ್ಞಾನ ಸಹ್ಯಾದ್ರಿ, ಕುವೆಂಪು ವಿಶ್ವವಿದ್ಯಾನಿಲಯ,<br>ಶಂಕರಘಟ್ಟ, ಶಿವಮೊಗ್ಗ– 577 451,<br>ದೂರವಾಣಿ: 08282–256255,<br>ಮೋ.ನಂ: 9449400725,<br>email :bsbiradar@kuvempu.ac.in |
| 11. **ತುಮಕೂರು**<br>ಪ್ರೊ.ಜಯರಾಮು.ಎಂ<br>ನಿರ್ದೇಶಕರು,<br>ಸ್ನಾತಕೋತ್ತರ ಅಧ್ಯಯನ ವಿಭಾಗ,<br>ತುಮಕೂರು ವಿಶ್ವವಿದ್ಯಾನಿಲಯ<br>ತುಮಕೂರು–572 103<br>ಮೋ.ನಂ: 91–9740778174<br>email: microjayaramum@gmail.com | |

**ಅರ್ಜಿಯನ್ನು ಸಲ್ಲಿಸುವ ವಿಧಾನ:**

1. ಅಭ್ಯರ್ಥಿಗಳು 2015ರ ಕೆಎಸ್‌ಇಟಿ ಪರೀಕ್ಷೆಗೆ ಪ್ರವೇಶವನ್ನು ಪಡೆಯಬೇಕಾದರೆ http://kset.uni-mysore.ac.in ಅಂತರಜಾಲದಲ್ಲಿ ಅಥವಾ uni-mysore.ac.in ನ ಮೂಲಕವೂ ಮೇಲಿನ ಅಂತರಜಾಲದಲ್ಲಿ **Online**ನಲ್ಲಿ ಅರ್ಜಿ ಸಲ್ಲಿಸಬಹುದು.

2. ಅಭ್ಯರ್ಥಿಗಳು **Online**ನಲ್ಲಿ ಅರ್ಜಿ ಸಲ್ಲಿಸುವ ಮೊದಲು Passport (PP) ಅಳತೆಯ ಭಾವಚಿತ್ರವನ್ನು JPEG ಮಾದರಿಯಲ್ಲಿ (4.5cm X 3.5cm ಅಳತೆಯಲ್ಲಿ**ರಬೇಕು** ಮತ್ತು 300kb **ಮೆ**ಮೊರಿ ಗಿಂತಲೂ ಕಡಿಮೆ**ಇರಬೇಕು**) ಸ್ಕ್ಯಾನ್ ಮಾಡಿಕೊಂಡಿರಬೇಕು.

3. ಅಭ್ಯರ್ಥಿಗಳು ತಮ್ಮ ವೈಯಕ್ತಿಕ ಮತ್ತು ವಿದ್ಯಾಭ್ಯಾಸದ ವಿವರಗಳನ್ನು ನಮೂದಿಸಬೇಕು (sign up for registration). ವಿದ್ಯಾಭ್ಯಾಸದ ವಿವರ ನೀಡುವಾಗ ಸ್ನಾತಕೋತ್ತರ ಪದವಿ ಪಡೆದವರು 'ಉತ್ತೀರ್ಣರಾದವರೆಂದು' ಮತ್ತು ಸ್ನಾತಕೋತ್ತರ ಪದವಿ ಗಳಿಸಿಲ್ಲದವರು 'ಅಪೀಯರಿಂಗ್ (Appearing)' ಎಂದು ನಮೂದಿಸತಕ್ಕದ್ದು.
**(ನೋಟ್: ಅಭ್ಯರ್ಥಿಗಳು ತಮ್ಮ ಇಮೇಲ್ ಐ.ಡಿ. ಹಾಗೂ ಪಾಸ್‌ವರ್ಡ್‌ಗಳನ್ನು 2015ರ ಕೆಎಸ್‌ಇಟಿ ಪರೀಕ್ಷೆಯ ಫಲಿತಾಂಶ ಪ್ರಕಟವಾಗುವವರೆಗೂ ಗುರುತಿಟ್ಟುಕೊಂಡಿರಬೇಕು.).**

4. ಅಭ್ಯರ್ಥಿಗಳು ಅಭ್ಯರ್ಥಿಯ ವಿವರ, ಇಮೇಲ್ ಐ.ಡಿ. ಯನ್ನು ಒಳಗೊಂಡ, ಭರ್ತಿ ಮಾಡಿದ ಬ್ಯಾಂಕ್‌ಚಲನ್‌ನ್ನು ಡೌನ್‌ಲೋಡ್ ಮಾಡಿಕೊಳ್ಳಬೇಕು. ಕೆಎಸ್‌ಇಟಿ ಪರೀಕ್ಷೆಗೆ ಸಂಬಂಧಪಟ್ಟ ಚಲನ್‌ನಲ್ಲಿ ನಮೂದಿಸಿರುವ ಶುಲ್ಕವನ್ನು ಯಾವುದಾದರು ಸಮೀಪದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಶಾಖೆಗೆ ಚಲನ್‌ನ್ನು ಡೌನ್‌ಲೋಡ್ ಮಾಡಿದ **ಎರಡು ದಿನದ ನಂತರ (After two working day)** ಹಣವನ್ನು ಪಾವತಿಸಬೇಕು.

5. ಶುಲ್ಕವನ್ನು ಪಾವತಿಸಿದ **ಎರಡು ದಿನಗಳ ನಂತರ** ಅಭ್ಯರ್ಥಿಗಳು ನೊಂದಾಯಿತ ಇಮೇಲ್ ಐಡಿ ಮತ್ತು ಪಾಸ್‌ವರ್ಡ್‌ನೊಂದಿಗೆ ಲಾಗ್‌ಇನ್ (Login) ಆಗಿ ಆನ್‌ಲೈನ್ ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಂಡು A4 ಅಳತೆಯ ಕಾಗದದಲ್ಲಿ ಕೆಳಕಂಡ ಮೂರು ಪುಟಗಳಲ್ಲಿ ಮುದ್ರಿಸಿಕೊಳ್ಳಬೇಕು.
    1. ಅರ್ಜಿಯ ಪ್ರತಿ } ಆಯ್ಕೆ ಮಾಡಿದ ನೋಡೆಲ್ ಕೇಂದ್ರಕ್ಕೆ ಸಲ್ಲಿಸುವುಸು
    2. ಹಾಜರಾತಿ ಪತ್ರ }
    3. ಪ್ರವೇಶ ಪತ್ರ ಅಭ್ಯರ್ಥಿಯು ತಮ್ಮಲ್ಲಿಯೇ ಇಟ್ಟುಕೊಳ್ಳುವುದು.

6. ಡೌನ್‌ಲೋಡ್ ಮಾಡಿದ ಅರ್ಜಿ, ಹಾಜರಾತಿ ಪತ್ರ ಮತ್ತು ಬ್ಯಾಂಕ್ ಚಲನ್ (ಕೆಎಸ್‌ಇಟಿ ಪ್ರತಿ) ಇವುಗಳ ಜೊತೆಗೆ ಈ ಕೆಳಕಂಡ ದಾಖಲಾತಿಗಳನ್ನು ಗೆಜೆಟೆಡ್ ಅಧಿಕಾರಿಯಿಂದ ದೃಢೀಕರಿಸಬೇಕು.
    1. ಎಸ್.ಎಸ್.ಎಲ್,ಸಿ ಅಂಕಪಟ್ಟಿಯ ಪ್ರತಿ.
    2. SC, ST, (PWD (VH/PH), Cat-I, IIA, IIB, IIIA, IIIB ಜಾತಿ ಪ್ರಮಾಣ ಪತ್ರದ ಪ್ರತಿ.
    3. ಸ್ನಾತ್ತಕೋತ್ತರ ಪದವಿ ಪರೀಕ್ಷೆಯ ಅಂಕಪಟ್ಟಿ ಹಾಗೂ ಪರೀಕ್ಷಾ ಅರ್ಹತಾ ಪ್ರಮಾಣ ಪತ್ರವನ್ನು ಸಲ್ಲಿಸುವುದು. (ಅಪೀಯರಿಂಗ್ "Appearing" ಅಭ್ಯರ್ಥಿಗಳು ಸ್ನಾತ್ತಕೋತ್ತರ ಪದವಿಗೆ ಪ್ರವೇಶವನ್ನು ಪಡೆದಿರುವ ಬಗ್ಗೆ ಸಂಬಂಧಪಟ್ಟ ಆಧಾರವನ್ನು ಲಗತ್ತಿಸಬೇಕು. ಅಂತಹ ಅಭ್ಯರ್ಥಿಗಳು ಸ್ನಾತ್ತಕೋತ್ತರ ಪದವಿಯಲ್ಲಿ ತೇರ್ಗಡೆಯಾದ ನಂತರ ತಮ್ಮ ಅಂಕಪಟ್ಟಿ ಹಾಗೂ ಪರೀಕ್ಷಾ ಅರ್ಹತಾ ಪ್ರಮಾಣ ಪತ್ರವನ್ನು ಸಲ್ಲಿಸುವುದು).

ಅಭ್ಯರ್ಥಿಗಳು ಅರ್ಜಿಯಲ್ಲಿ ಕಾಯ್ದಿರಿಸಿದ ಸ್ಥಳದಲ್ಲಿ ಭಾವಚಿತ್ರವನ್ನು ಅಂಟಿಸಿ ಅದರ ಮೇಲೆ ಚಿತ್ರದ ಇಕ್ಕೆಲಗಳಲ್ಲೂ ಬರುವಂತೆ ಸಹಿ ಮಾಡಬೇಕು. ಭಾವಚಿತ್ರಕ್ಕೆ ಗೆಜೆಟೆಡ್ ಅಧಿಕಾರಿಯಿಂದ ಸಹಿ ಮತ್ತು ಅಧಿಕೃತ ಮೊಹರಿನೊಂದಿಗೆ ಧೃಡೀಕೃತಗೊಳಿಸಬೇಕು.

7. ಅಭ್ಯರ್ಥಿಗಳು ಕಡ್ಡಾಯವಾಗಿ ಅರ್ಜಿಯನ್ನು ತೆಗೆದುಕೊಳ್ಳಲು ನೀಡಲಾಗಿರುವ ಕೊನೆಯ ದಿನಾಂಕದೊಳಗೆ ಸಂಬಂಧಪಟ್ಟ ನೊಡೆಲ್ ಕೇಂದ್ರಕ್ಕೆ ಸಲ್ಲಿಸಬೇಕು. ಹಾಗೂ ಕೊನೆ ದಿನಗಳ ನಂತರ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

8. ಅರ್ಜಿಯನ್ನು ಮತ್ತು ಸಂಬಂಧಿಸಿದ ಇತರ ದಾಖಲಾತಿಗಳನ್ನು A4 ಅಳತೆಯಿರುವ ಲಕೋಟೆಯಲ್ಲಿ ಹಾಕಿ ಅದರ ಮುಖಪುಟದ ಮೇಲೆ **"ಕೆಎಸ್‌ಇಟಿ ಪರೀಕ್ಷೆ – 2015"** ಎಂದು ನಮೂದಿಸಿರಬೇಕು.

9. ಅಭ್ಯರ್ಥಿಗಳು ಪ್ರವೇಶ ಪತ್ರವನ್ನು ತಮ್ಮಲ್ಲಿಯೇ ಇಟ್ಟುಕೊಳ್ಳಬೇಕು ಹಾಗೂ ಪ್ರವೇಶ ಪತ್ರಕ್ಕೆ ಭಾವಚಿತ್ರವನ್ನು ಅಂಟಿಸಿ ಅದರ ಮೇಲೆ ಚಿತ್ರದ ಇಕ್ಕೆಲಗಳಲ್ಲೂ ಬರುವಂತೆ ಸಹಿ ಮಾಡಬೇಕು. ಭಾವಚಿತ್ರಕ್ಕೆ ಗೆಜೆಟೆಡ್ ಅಧಿಕಾರಿಯಿಂದ ಅಧಿಕೃತ ಮೊಹರಿನೊಂದಿಗೆ ಧೃಡೀಕರಿಸಿ ಪರೀಕ್ಷಾ

ದಿನದಂದು ಹಾಜರುಪಡಿಸಬೇಕು. **<u>ನೋಡೆಲ್ ಕೇಂದ್ರವು ಯಾವ ಅಭ್ಯರ್ಥಿಗಳಿಗೂ ಪ್ರತ್ಯೇಕವಾಗಿ ಪ್ರವೇಶ ಪತ್ರವನ್ನು ನೀಡುವುದಿಲ್ಲ.</u>**

**ಸಾಮಾನ್ಯ ಸೂಚನೆ**

1. ಅಭ್ಯರ್ಥಿಗಳು ಅರ್ಹತಾ ನಿಬಂಧನೆಗಳನ್ನು ಗಮನವಿಟ್ಟು ಓದಿ, ಅಭ್ಯರ್ಥಿಗಳು ಕೆಎಸ್ಇಟಿ ಪರೀಕ್ಷೆಗೆ ಅರ್ಹತೆಯನ್ನು ಪಡೆದಿದ್ದಾರೋ ಇಲ್ಲವೋ ಎಂಬುದನ್ನು ಖಚಿತ ಪಡಿಸಿಕೊಂಡು, **Online** ನಲ್ಲಿ ಅರ್ಜಿಯನ್ನು ಸಲ್ಲಿಸತಕ್ಕದ್ದು ಹಾಗೂ ಅರ್ಜಿಯನ್ನು ಆಯ್ಕೆ ಮಾಡಿಕೊಂಡ ಪರೀಕ್ಷಾ ಕೇಂದ್ರದ ನೋಡೆಲ್ ಅಧಿಕಾರಿಯವರಿಗೆ ಸಲ್ಲಿಸಬೇಕು.

2. ಕೆಎಸ್ಇಟಿ ಪರೀಕ್ಷಾ ಕೇಂದ್ರವನ್ನು ಅಥವಾ ಪರೀಕ್ಷಾ ದಿನಾಂಕವನ್ನು ಯಾವುದೇ ಕಾರಣ ನೀಡದೆ ಬದಲಾಯಿಸಬಹುದು.

3. ಪರೀಕ್ಷೆಯನ್ನು ತೆಗೆದುಕೊಳ್ಳುವ ಅಭ್ಯರ್ಥಿಗಳಿಗೆ ಪ್ರಯಾಣಭತ್ಯೆಯನ್ನು ನೀಡಲಾಗುವುದಿಲ್ಲ.

4. ಪರೀಕ್ಷೆಯ ಬಗ್ಗೆ ಯಾವುದೇ ತರಹದ ಒತ್ತಡ ಅಥವಾ ಪ್ರಭಾವ ಬೀರಲು ಯತ್ನಿಸುವ ಅಭ್ಯರ್ಥಿಗಳನ್ನು ಕೆಎಸ್ಇಟಿ ಪರೀಕ್ಷೆಯಿಂದ ಅನರ್ಹಗೊಳಿಸಲಾಗುವುದು.

5. ಯಾವುದೇ ಹೆಚ್ಚಿನ ಮಾಹಿತಿಗಾಗಿ ಅಭ್ಯರ್ಥಿಗಳು ಆಯ್ಕೆಮಾಡಿಕೊಂಡ ಅಯಾ ಪರೀಕ್ಷಾ ಕೇಂದ್ರದ ನೋಡೆಲ್ ಅಧಿಕಾರಿಯವರನ್ನು (ಹೆಸರು, ವಿಳಾಸ ಈ ವೆಬ್‌ಸೈಟ್ ನಲ್ಲಿ **<u>http://kset.uni-mysore.ac.in</u>** ಲಭ್ಯ) ಸಂಪರ್ಕಿಸಬಹುದು.

6. ವಿಕಲಚೇತನ ಅಭ್ಯರ್ಥಿಗಳು (PWD) – VH & PH (visually & Physically handicapped) **<u>ಜಿಲ್ಲಾ ಸಿವಿಲ್ ಸರ್ಜನ್ ರವರಿಂದ ವೈದ್ಯಕೀಯ ಪ್ರಮಾಣ ಪತ್ರವನ್ನು ಧೃಡೀಕರಿಸಿ</u> ಲಗತ್ತಿಸಬೇಕು.**

7. ಬೇರೆ ಯಾವುದೇ ನಮೂನೆಯ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

8. ಅಭ್ಯರ್ಥಿಗಳು ಅರ್ಜಿಯಲ್ಲಿ ನಿಗದಿತ ಜಾಗದಲ್ಲಿ ಸಹಿ ಹಾಕುವುದನ್ನು ಮರೆಯಬಾರದು. ಅರ್ಜಿ, ಪ್ರವೇಶ ಪತ್ರ ಮತ್ತು ಹಾಜರಾತಿ ಪತ್ರದಲ್ಲಿ ಭಾವಚಿತ್ರ ಅಂಟಿಸಲು ಕೊಟ್ಟಿರುವ ಜಾಗದಲ್ಲಿಯೇ ಭಾವಚಿತ್ರವನ್ನು ಅಂಟಿಸಬೇಕು ಹಾಗೂ ಎಲ್ಲಾ ಭಾವಚಿತ್ರಗಳು ಒಂದೇ ತರಹದ್ದಾಗಿರಬೇಕು.

9. ಅಭ್ಯರ್ಥಿಗಳು ತಮ್ಮ ಹಿತದೃಷ್ಟಿಯಿಂದ ಅರ್ಜಿ ಪ್ರತಿ ಹಾಗೂ ಹಾಜರಾತಿ ಪತ್ರದ ಪ್ರತಿ, ಪ್ರವೇಶ ಪತ್ರದ ಪ್ರತಿಗಳನ್ನು ತಮ್ಮೊಂದಿಗೆ ಇರಿಸಿಕೊಳ್ಳಲು ಸೂಚಿಸಲಾಗಿದೆ. ಇದರಿಂದ ಅಭ್ಯರ್ಥಿಗಳಿಗೆ ಕೆಎಸ್ಇಟಿ ಪರೀಕ್ಷೆಯ ಬಗ್ಗೆ ಮಾಹಿತಿ ತಿಳಿದುಕೊಳ್ಳಲು ಸಹಾಯಕವಾಗುತ್ತದೆ.

10. **Online**ನಲ್ಲಿ ಸಲ್ಲಿಸಿದ ಅರ್ಜಿಗಳನ್ನು ಸಂಯೋಜಕರು, ಕೆಎಸ್ಇಟಿ ಕೇಂದ್ರ, ಮೈಸೂರು ಇಲ್ಲಿಗೆ ನೇರವಾಗಿ ಕಳುಹಿಸುವಂತಿಲ್ಲ.

11. ಅರ್ಜಿಗಳನ್ನು ಸಲ್ಲಿಸಲು ನಿಗಧಿ ಪಡಿಸಿದ ದಿನಾಂಕದ ನಂತರ ಬರುವ ಅರ್ಜಿಯನ್ನು ಸ್ವೀಕರಿಸಲಾಗುವುದಿಲ್ಲ.

12. **ಅರ್ಜಿಯನ್ನು Online ನಲ್ಲಿ ಸಲ್ಲಿಸುವುದು ಕಡ್ಡಾಯ**. ಅರ್ಜಿಗಳನ್ನು **Online** ನಲ್ಲಿ ಸಲ್ಲಿಸದೇ ನೇರವಾಗಿ ನೋಡಲ್ ಅಧಿಕಾರಿಗಳ ಪರೀಕ್ಷಾ ಕೇಂದ್ರಗಳಿಗೆ ಸಲ್ಲಿಸುವಂತಹ ಅರ್ಜಿಗಳನ್ನು ಒಪ್ಪಿಕೊಳ್ಳುವುದಿಲ್ಲ.

13. ಭರ್ತಿ ಮಾಡಿದ ಅರ್ಜಿಯಲ್ಲಿರುವ ಘೋಷಣೆಗೆ ಅಭ್ಯರ್ಥಿಗಳು ಮರೆಯದೆ ಸಹಿ ಮಾಡಿರಬೇಕು. ಘೋಷಣೆಗೆ ಸಹಿ ಮಾಡದ ಅಭ್ಯರ್ಥಿಯ ಅರ್ಜಿಯನ್ನು ತಿರಸ್ಕರಿಸಲಾಗುವುದು.

14. ಈ ಕೆಳಕಂಡ ಮಾಹಿತಿ / ಧೃಢೀಕೃತ ದಾಖಲೆಗಳನ್ನು ಪೂರೈಸದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
    1. ಸರಿಯಾದ ಪರೀಕ್ಷಾ ಕೇಂದ್ರದ ಆಯ್ಕೆ
    2. ಸರಿಯಾದ ವಿಷಯದ ಆಯ್ಕೆ
    3. SC,ST, PWD (VH/PH) Cat-I, IIA, IIB, IIIA, IIIB ರ ಆಧಾರವುಳ್ಳ ಪ್ರವರ್ಗ ಪ್ರಮಾಣಪತ್ರದ ಪ್ರತಿ.
       ಅಭ್ಯರ್ಥಿಗಳು ಸರಿಯಾದ ಪ್ರವರ್ಗ ಪ್ರಮಾಣಪತ್ರದ ಪ್ರತಿಯನ್ನು (SC, ST, PWD (VH/PH) Cat-I, IIA, IIB, IIIA, IIIB) ಮುದ್ರಿತ ಅರ್ಜಿಯೊಂದಿಗೆ ಸಲ್ಲಿಸಿರುವುದಿಲ್ಲವೋ ಅಂತಹ ಅಭ್ಯರ್ಥಿಗಳ ಫಲಿತಾಂಶವನ್ನು ತಡೆಹಿಡಿಯಲಾಗುವುದು.
       **(ಸೂಚನೆ: ಆನ್‌ಲೈನ್ ಅರ್ಜಿಯಲ್ಲಿ ಸೂಚಿಸುವ ಪ್ರವರ್ಗವೇ ಅಂತಿಮವಾಗಿರುತ್ತದೆ. ಯಾವುದೇ ಕಾರಣಕ್ಕೂ ಮುಂದೆ ಪ್ರವರ್ಗದ ಬದಲಾವಣೆಯನ್ನು ಪರಿಗಣಿಸಲಾಗುವುದಿಲ್ಲ).**

15. ಅಪೂರ್ಣ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

16. ಅಭ್ಯರ್ಥಿಯು ಪತ್ರಿಕೆ-I ಮತ್ತು ಪತ್ರಿಕೆ–IIಕ್ಕೆ ಹಾಜರಾಗದಿದ್ದಲ್ಲಿ, ಆ ಅಭ್ಯರ್ಥಿಯನ್ನು ಪತ್ರಿಕೆ–III ರಲ್ಲಿ ಹಾಜರಾಗಲು ಅನುಮತಿ ನೀಡುವುದಿಲ್ಲ.

17. **ಯಾವುದೇ ರೀತಿಯ ನಕಾರಾತ್ಮಕ (Negetive mark) ಅಂಕಗಳು ಇರುವುದಿಲ್ಲ.**

18. ಯಾವುದೇ ತರಹದ ಕ್ಯಾಲ್ಕುಲೇಟರ್, ಸೆಲ್‌ಫೋನ್, ಪೇಜರ್, ಮೊಬೈಲ್ ಹಾಗೂ ಇತರೆ ಸಂಬಂಧಿಸಿದ ಎಲೆಕ್ಟ್ರಾನಿಕ್ ಉಪಕರಣಗಳನ್ನು ಪರೀಕ್ಷಾಭವನ/ಕೊಠಡಿಗೆ ತರಲು ಅನುಮತಿ ಇರುವುದಿಲ್ಲ.

19. ಅಭ್ಯರ್ಥಿಗಳು ಪ್ರವೇಶ ಪತ್ರದಲ್ಲಿ ಅಥವಾ ಇತರ ಕಾಗದಗಳ ಮೇಲೆ ಏನನ್ನು ಬರೆಯಲು ಅವಕಾಶವಿರುವುದಿಲ್ಲ.

20. ಅಭ್ಯರ್ಥಿಗಳು ಮೊದಲನೇ ಅವಧಿ ಪರಿಕ್ಷೆಗೆ 9.00 ಗಂಟೆಗೆ ಹಾಗೂ ಎರಡನೇ ಅವಧಿ ಪರಿಕ್ಷೆಗೆ 1.00 ಗಂಟೆಗೆ ಕಾಯ್ದಿರಿಸಿದ ಕೊಠಡಿ ಮತ್ತು ಆಸನದಲ್ಲಿ ಹಾಜರಿರಬೇಕು. ಅಭ್ಯರ್ಥಿಗಳು ಮೊದಲನೇ ಅವಧಿಯಲ್ಲಿ 11.45 ಮತ್ತು ಎರಡನೇ ಅವಧಿಯಲ್ಲಿ 3.30ರ ಮುಂಚಿತವಾಗಿ ಪರೀಕ್ಷಾ ಕೊಠಡಿಯಿಂದ ಹೊರಹೋಗಲು ಅವಕಾಶವಿರುವುದಿಲ್ಲ.

21. ಅಭ್ಯರ್ಥಿಗಳು ಪತ್ರಿಕೆ–1, ಪತ್ರಿಕೆ–2 ಮತ್ತು ಪತ್ರಿಕೆ–3ರ ಉತ್ತರವನ್ನು ಕೊಟ್ಟಿರುವ ಓಎಂಆರ್ ಶೀಟ್‌ನಲ್ಲೇ ಗುರುತು ಮಾಡತಕ್ಕದ್ದು. **ಪತ್ರಿಕೆ–1ರಲ್ಲಿರುವ ಬುಕ್‌ಲೆಟ್ ಸೀರಿಸ್ ಕೋಡ್ ಅನ್ನು (W, X, Y, Z) ಓಎಂಆರ್ ಶೀಟ್‌ನಲ್ಲಿ ನಮೂದಿಸತಕ್ಕದು, ತಪ್ಪಿದಲ್ಲಿ ಯಾವುದೇ ಕಾರಣಕ್ಕೂ ಪತ್ರಿಕೆ–1ನ್ನು ಮೌಲ್ಯಮಾಪನ ಮಾಡಲಾಗುವುದಿಲ್ಲ.**

22. ಅಭ್ಯರ್ಥಿಗಳು ಪತ್ರಿಕೆ–I ಮತ್ತು ಪತ್ರಿಕೆ–IIರ ಹಾಗೂ ಪತ್ರಿಕೆ–III ರ ಓ.ಎಮ್.ಆರ್ ಪತ್ರಿಯನ್ನು ಕೊಠಡಿಯ ಮೇಲ್ವಿಚಾರಕರು ಹಿಂಪಡೆದ ನಂತರವೇ ಪರೀಕ್ಷಾ ಕೊಠಡಿಯಿಂದ ನಿರ್ಗಮಿಸುವುದು.

ಅಭ್ಯರ್ಥಿಗಳು ಪರೀಕ್ಷೆ ಮುಗಿದ ನಂತರ ಪತ್ರಿಕೆ–I, ಪತ್ರಿಕೆ–II ಮತ್ತು ಪತ್ರಿಕೆ–III ರ ಪ್ರಶ್ನೆ ಪತ್ರಿಕೆಗಳನ್ನು ಹಾಗೂ ಕಾರ್ಬನ್ ಓ.ಎಮ್.ಆರ್‌ನ ಪತ್ರಿಯನ್ನು ತಮ್ಮೊಂದಿಗೆ ತೆಗೆದುಕೊಂಡು ಹೋಗಬಹುದು.

23. ವಿಕಲಚೇತನ ಅಭ್ಯರ್ಥಿಗಳು (PWD) –VH (ದೃಷ್ಟಿದೋಷವುಳ್ಳ) PH (ಅಂಗವಿಕಲ) ಪತ್ರಿಕೆ–I ಮತ್ತು ಪತ್ರಿಕೆ–IIಕ್ಕೆ, 30 ನಿಮಿಷಗಳ ಹೆಚ್ಚುವರಿ ಅವಧಿ ನೀಡಲಾಗುವುದು. ಪತ್ರಿಕೆ–III ಕ್ಕೆ, 45 ನಿಮಿಷಗಳ ಹೆಚ್ಚುವರಿ ಅವಧಿ ನೀಡಲಾಗುವುದು. ಅವರಿಗೆ ಅಭ್ಯರ್ಥಿಯು ಆಯ್ದ ವಿಷಯವಲ್ಲದ ಒಬ್ಬ ಪದವೀಧರ ಬರವಣಿಗೆದಾರರ ನೆರವನ್ನು ನೀಡಲಾಗುವುದು. ಬರವಣಿಗೆದಾರರ ನೆರವನ್ನು ಪಡೆಯಬಯಸುವವರು ಪರೀಕ್ಷೆಗೆ 10 ದಿನಗಳ ಮುನ್ನವೇ ಆಯಾ ಪರೀಕ್ಷಾ ಕೇಂದ್ರದ ನೋಡಲ್ ಅಧಿಕಾರಿಯವರಿಗೆ ಲಿಖಿತ ಮನವಿ ಸಲ್ಲಿಸಬೇಕು. ಸ್ವತಃ ಬರಹಗಾರರನ್ನು ಕರೆತರುವ ಅಭ್ಯರ್ಥಿಗಳು ಬರಹಗಾರರ ವಿದ್ಯಾರ್ಹತೆಗೆ ಸಂಬಂಧಪಟ್ಟ ಅಂಕಪಟ್ಟಿಗಳು ಮತ್ತು ಲಿಖಿತ ಪತ್ರದೊಂದಿಗೆ 10 ದಿನಗಳ ಮುನ್ನವೇ ಬರಹಗಾರರನ್ನು ಆಯಾ ಪರೀಕ್ಷಾ ಕೇಂದ್ರದ ನೋಡಲ್ ಅಧಿಕಾರಿಯವರಿಗೆ ಭೇಟಿ ಮಾಡಿಸಿ ಅವರ ಒಪ್ಪಿಗೆಯನ್ನು ಪಡೆಯಬೇಕು. ಹೆಚ್ಚಿನ ಅವಧಿ ಹಾಗೂ ಬರವಣಿಗೆದಾರರನ್ನು ಇತರ ಅಂಗವಿಕಲ ಅಭ್ಯರ್ಥಿಗಳಿಗೆ ಒದಗಿಸಲಾಗುವುದಿಲ್ಲ.

24. ಅಭ್ಯರ್ಥಿಗಳಿಗೆ ಕೆಎಸ್‌ಇಟಿ ಪರೀಕ್ಷೆಯ ಪೂರ್ಣಮಾಹಿತಿಯನ್ನು ಕೆಎಸ್‌ಇಟಿ ಅಂತರ್ಜಾಲದಲ್ಲಿ **http://kset.uni-mysore.ac.in** ಅಭ್ಯರ್ಥಿಯ ಮಾರ್ಗದರ್ಶನ, ಮಾದರಿ ಓ.ಎಮ್.ಆರ್ ಮತ್ತು ಅದನ್ನು ಬಳಸುವ ರೀತಿಯನ್ನು ತಿಳಿಸಲಾಗಿರುತ್ತದೆ ಹಾಗೂ ಅಭ್ಯಥಿಗಳಿಗೆ ಅಂಚೆ ಮೂಲಕ ಯಾವುದೇ ಮಾಹಿತಿಯ ಪ್ರತಿಯನ್ನು ನೀಡಲಾಗುವುದಿಲ್ಲ.

25. ಕೆಎಸ್‌ಇಟಿ ಕೇಂದ್ರವು ಉತ್ತೀರ್ಣ/ಅನುತ್ತೀರ್ಣಗೊಂಡ ಅಭ್ಯರ್ಥಿಗಳಿಗೆ ಯಾವುದೇ ಅಂಕಪಟ್ಟಿಯನ್ನು ನೀಡುವುದಿಲ್ಲ.

26. ಮರುಮೌಲ್ಯಮಾಪನಕ್ಕೆ ಅಥವಾ ಮರು ಎಣಿಕೆಗೆ ಅವಕಾಶವಿರುವುದಿಲ್ಲ.

27. ಎಲ್ಲಾ ವಿಷಯದಲ್ಲೂ ಕೆಎಸ್‌ಇಟಿ ಪ್ರಾಧಿಕಾರದ ನಿರ್ಣಯವೇ ಅಂತಿಮವಾಗಿರುತ್ತದೆ.

28. ಅಭ್ಯರ್ಥಿಗಳು ಕೆಎಸ್‌ಇಟಿ ಪರೀಕ್ಷೆಗೆ ಸಂಬಂಧಪಟ್ಟಂತೆ ಬಿಡುಗಡೆಗೊಳಿಸಿದ ಉತ್ತರಗಳ ಆಕ್ಷೇಪಣೆಗೆ ಸ್ಪಷ್ಟೀಕರಿಸಿ ಅಂತಿಮ ಉತ್ತರವನ್ನು ನೀಡಿ ಫಲಿತಾಂಶವನ್ನು ಪ್ರಕಟಿಸಿದ ಮೇಲೂ ಅಭ್ಯರ್ಥಿಗಳು ಪುನಃ ಆಕ್ಷೇಪಣೆಯನ್ನು ಕೆಎಸ್‌ಇಟಿ ಕೇಂದ್ರಕ್ಕೆ ಸವಾಲು ಹಾಕಲು ಅವಕಾಶವಿದೆ. ಅಂತಹ ಅಭ್ಯರ್ಥಿಗಳು ಲಿಖಿತ ಮನವಿಯನ್ನು ಪ್ರಶ್ನೆಪತ್ರಿಕೆ ಸಂಖ್ಯೆ, ಪ್ರಶ್ನೆ/ಗಳ ಸಂಖ್ಯೆ ಹಾಗೂ ಅಪೇಕ್ಷಿಸುವ ಬದಲಿ ಉತ್ತರವನ್ನು ಸರಿಯಾಗಿ ನಮೂದಿಸಿ ಸಂಬಂಧಪಟ್ಟ ಉತ್ತಮ ಪುಸ್ತಕಗಳು/ ಸಾಹಿತ್ಯಗಳ ಜೊತೆಗೆ ರೂ.5000/– ಗಳ ಡಿಮ್ಯಾಂಡ್ ಡ್ರಾಫ್ಟ್ ನ್ನು ಸಂಯೋಜನಾಧಿಕಾರಿಗಳು, ಕೆಎಸ್‌ಇಟಿ ಕೇಂದ್ರ, ಪರೀಕ್ಷಾ ಭವನ, ಕ್ರಾಫರ್ಡ್ ಹಾಲ್, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು– 570 005 ಇಲ್ಲಿಗೆ ಫಲಿತಾಂಶ ಪ್ರಕಟಣೆಯಾದ 15 ದಿನಗಳೊಳಗೆ ಕಳುಹಿಸಬೇಕು. ಅಭ್ಯರ್ಥಿಗಳಿಂದ ಬಂದಂತಹ ಮನವಿಗಳನ್ನು ನುರಿತ ತಜ್ಞರಿಂದ ಮತ್ತೊಮ್ಮೆ ಪರಿಶೀಲನೆಗೆ ಒಳಪಡಿಸಿ ಅವರಿಂದ ಪರಿಷ್ಕರಿಸಲಾಗುವುದು. ಒಂದು ವೇಳೆ ಪ್ರಕಟಿಸಿದ ಉತ್ತರಗಳಲ್ಲಿ ಬದಲಾವಣೆಗಳು ಕಂಡುಬಂದರೆ ಅದರಂತೆ **ಅಂತಹವರ ಫಲಿತಾಂಶವನ್ನು ಕೋರಿದ ಪ್ರಶ್ನೆಗಳಿಗೆ ಮಾತ್ರ ಪುನಃ ಸರಿಪಡಿಸಲಾಗುವುದು**. ಈ ವಿಚಾರದಲ್ಲಿ ಕೆಎಸ್‌ಇಟಿ ತೆಗೆದುಕೊಂಡ ತೀರ್ಮಾನವೇ ಅಂತಿಮವಾಗಿರುತ್ತದೆ. ಈಗಾಗಲೇ ಪ್ರಕಟಗೊಂಡ ಇತರ ಅಭ್ಯರ್ಥಿಗಳ ಅರ್ಹತಾ ಪಟ್ಟಿಯನ್ನು ಯಾವುದೇ ಕಾರಣಕ್ಕೂ ಬದಲಾಯಿಸಲಾಗುವುದಿಲ್ಲ. **[ನೋಟ್: ಸವಾಲು ಉತ್ತರಗಳಿಗೆ ನೀಡಿದ ಶುಲ್ಕವನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ.]**

29. ಪರೀಕ್ಷೆಗೆ ಸಂಬಂಧಪಟ್ಟ ಯಾವುದೇ ವಿವಾದಗಳಿದ್ದಲ್ಲಿ, ಕರ್ನಾಟಕದ ಉಚ್ಛನ್ಯಾಯಾಲಯದ (High Court) ವ್ಯಾಪ್ತಿಗೆ ಒಳಪಟ್ಟಿರುತ್ತದೆ.

**ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ಭರ್ತಿಮಾಡುವಾಗ ಹಾಗೂ ಮುದ್ರಿತ ಅರ್ಜಿಯನ್ನು ನೋಡೆಲ್ ಕೇಂದ್ರಕ್ಕೆ ಸಲ್ಲಿಸುವಾಗ ಗಮನಿಸಬೇಕಾದ ವಿವರಗಳು:**

1. ಪ್ರಕಟಣೆಯಲ್ಲಿರುವಂತೆ **'ಅರ್ಹತಾ ನಿಯಮಗಳನ್ನು'** ಅಭ್ಯರ್ಥಿಗಳು ಪೂರೈಸಿರುವ ಬಗ್ಗೆ ಪರಿಶೀಲಿಸಿಕೊಳ್ಳಬೇಕು.
2. SC, ST, PWD (VH/ PH) Cat-1, IIA, IIB, IIIA ಮತ್ತು IIIB ಅಭ್ಯರ್ಥಿಗಳು ಸಂಬಂಧಿಸಿದ **ಮೀಸಲಾತಿ**ಯನ್ನು ಸರಿಯಾಗಿ ನಿಗಧಿಪಡಿಸಿದ ಕಾಲಂನಲ್ಲಿ ತುಂಬಲಾಗಿದೆಯೇ ಅಥವಾ ಇಲ್ಲವೇ ಎಂಬುವುದನ್ನು ಪರೀಕ್ಷಿಸಿಕೊಳ್ಳಿ.
3. ಸರಿಯಾದ ವಿಷಯ ಹಾಗೂ ಪರೀಕ್ಷಾ ಕೇಂದ್ರವನ್ನು ಆಯ್ಕೆ ಮಾಡಿ ಸಂಬಂಧಿಸಿದ ಕಾಲಂಗಳನ್ನು ಭರ್ತಿಮಾಡಿದೆಯೋ ಇಲ್ಲವೋ ಎಂಬುದನ್ನು ಗಮನಿಸಿಕೊಳ್ಳಿ.
4. **PWD (VH/ PH**) ಅಭ್ಯರ್ಥಿಗಳು ಸಂಬಂಧಿಸಿದ ಕಾಲಂನ್ನು **Online**ನ ಅರ್ಜಿಯಲ್ಲಿ ಭರ್ತಿಮಾಡಲಾಗಿದೆಯೇ ಇಲ್ಲವೋ ಎಂಬುವುದನ್ನು ಖಚಿತಪಡಿಸಿಕೊಳ್ಳಬೇಕು. ಕೇವಲ PWD (VH/ PH) ಅಭ್ಯರ್ಥಿಗಳು ಮಾತ್ರ ಈ ಕಾಲಂನ್ನು ಭರ್ತಿಮಾಡಕ್ಕದ್ದು,
5. ಆನ್‌ಲೈನ್ ಅರ್ಜಿ, ಹಾಜರಾತಿ ಪತ್ರ ಮತ್ತು ಪ್ರವೇಶ ಪತ್ರಕ್ಕೆ ಸಹಿ ಮಾಡಲಾಗಿದೆಯೋ ಇಲ್ಲವೋ ಎಂಬುದನ್ನು ಗಮನಿಸಿಬೇಕು.
6. ಸಂಬಂಧಿಸಿದ ಪರೀಕ್ಷಾ ಕೇಂದ್ರಕ್ಕೆ ಮುದ್ರಿತ **Online** ಅರ್ಜಿಯನ್ನು ಸಲ್ಲಿಸುವಾಗ ಅರ್ಜಿಯೊಂದಿಗೆ ಬೇಕಾಗಿರುವ ದಾಖಲೆಗಳನ್ನು ಲಗತ್ತಿಸಿದೆಯೇ, ಇಲ್ಲವೇ ಎಂದು ಗಮನಿಸಿ.
7. ಸಲ್ಲಿಸಿರುವ ಮುದ್ರಿತ **Online** ಅರ್ಜಿಯೊಂದಿಗೆ ಲಗತ್ತಿಸಿರುವ ದಾಖಲೆ ಪ್ರತಿಗಳನ್ನು ಅಭ್ಯರ್ಥಿಗಳು ತಮ್ಮ ಹಿತದೃಷ್ಟಿಯಿಂದ ತಮ್ಮೊಡನೆ ಒಂದು ಪ್ರತಿಯನ್ನು ಇಟ್ಟುಕೊಳ್ಳಬೇಕು.
8. ಸ್ನಾತಕೋತ್ತರ ಪದವಿಯ ಅಂತಿಮ ವರ್ಷದ ಅಂಕಪಟ್ಟಿಯನ್ನು ಲಗತ್ತಿಸಬೇಕು, ಒಂದು ವೇಳೆ ಸ್ನಾತಕೋತ್ತರ ಪದವಿಯ ಅಂಕಪಟ್ಟಿಯನ್ನು / ಮೊದಲನೆ ವರ್ಷದ ಅಥವಾ ಮೊದಲನೇ ಮತ್ತು ಎರಡನೇ ಸೆಮಿಸ್ಟರ್‌ನಲ್ಲಿ ತೇರ್ಗಡೆಯಾಗಿರುವ ಅಂಕಪಟ್ಟಿಯನ್ನು ಲಗ್ಗತ್ತಿಸಿದೆಯೋ, ಇಲ್ಲವೋ ಎಂಬುದನ್ನು ಗಮನಿಸಿ.
9. ಬ್ಯಾಂಕ್ ಚಲನ್‌ನನ್ನು (ಕೆಎಸ್‌ಇಟಿ ಪ್ರತಿ) ಅರ್ಜಿಯ ಜೊತೆ ಲಗತ್ತಿಸಲಾಗಿದೆಯೇ ಆಥವಾ ಇಲ್ಲವೋ ಎಂಬುದನ್ನು ಗಮನಿಸಿ.
10. SC /ST / PWD (VH/ PH) ಮತ್ತು Cat-1, IIA, IIB, IIIA, IIIB ಅಭ್ಯರ್ಥಿಗಳಾಗಿದ್ದರೇ, ಜಾತಿ ಮತ್ತು ಪ್ರವರ್ಗ ಪ್ರಮಾಣಪತ್ರದ ದೃಢೀಕರಿಸಿದ ಪ್ರತಿಗಳನ್ನು ಲಗತ್ತಿಸಲಾಗಿದೆಯೇ ಆಥವಾ ಇಲ್ಲವೇ ಎಂಬುದನ್ನು ಗಮನಿಸಿ.

**ಅರ್ಜಿಯೊಂದಿಗೆ ಸಲ್ಲಿಸಬೇಕಾದ ಅಡಕಗಳು.**

1) ಅಭ್ಯರ್ಥಿಯು ಈ ಕೆಳಕಂಡ ದಾಖಲೆಗಳನ್ನು **Online** ನ ಮುದ್ರಿತ ಅರ್ಜಿಯೊಂದಿಗೆ ಅಭ್ಯರ್ಥಿಯು ಸಂಬಂದಪಟ್ಟ ಪರೀಕ್ಷಾ ಕೇಂದ್ರದ ನೋಡಲ್ ಅಧಿಕಾರಿಗಳಿಗೆ A-4 ಅಳತೆಯ ಕಾಗದದಲ್ಲಿ ಮುದ್ರಿಸಿ ಸಲ್ಲಿಸಬೇಕು.
   - ಎ) ಅರ್ಜಿ (ಒಂದು ಪ್ರತಿ)
   - ಬಿ) ಹಾಜರಾತಿ ಪತ್ರ (ಒಂದು ಪ್ರತಿ)

2) ಬ್ಯಾಂಕ್ ಚಲನ್ (ಕೆಎಸ್ಇಟಿ ಪ್ರತಿ).

3) ಅಭ್ಯರ್ಥಿಗಳು ಗೆಜೆಟೆಡ್ ಅಧಿಕಾರಿಗಳಿಂದ ಧೃಡೀಕರಣಗೊಳಿಸಿದ SC, ST, PWD (VH/PH), Cat-1, IIA, IIB, IIIA, IIIB ಜಾತಿ ಪ್ರಮಾಣಪತ್ರವನ್ನು ಅರ್ಜಿಯೊಂದಿಗೆ ಲಗತ್ತಿಸಬೇಕು.

4) ಅಭ್ಯರ್ಥಿಯ ಹೆಸರು ಮತ್ತು ತಂದೆ ತಾಯಿಯ ಹೆಸರನ್ನು ಪರಿಶೀಲಿಸುವುದಕ್ಕಾಗಿ ಧೃಡೀಕೃತಗೊಂಡಿರುವ SSLC ಅಂಕಪಟ್ಟಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಒಂದು ವೇಳೆ ಹೆಸರು ಬದಲಾವಣೆಯಾಗಿದ್ದಲ್ಲಿ, ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸುವುದು.

6) ಅಂತಿಮ ವರ್ಷದ ಸ್ನಾತಕೋತ್ತರ ಪದವಿಯ ಧೃಡೀಕೃತ ಅಂಕಪಟ್ಟಿಯ ಪ್ರತಿ.

**ಪ್ರಕಟಣೆಯ ಮುದ್ರಣದಲ್ಲಿ ಯಾವುದೇ ಲೋಪದೋಷಗಳು ಕಂಡುಬಂದಲ್ಲಿ ಕೆಎಸ್ಇಟಿ ಕೇಂದ್ರವು ಜವಾಬ್ದಾರಿಯಲ್ಲ.**